# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038




HAMPI TIMES
No.1 Leading Local News Paper
90,000 E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:02 • ಸಂಚಿಕೆ: 86 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 28.09.2024 • ಶನಿವಾರ • ಪುಟ:04 • ಬೆಲೆ:2
Volume:02 • Issue: 86 • PRGI No:KARKAN/2023/88055 • VIJAYANAGARA • 28.09.2024 • Saturday • Page:04 • Rs:2



September 30
ತಾಂಡೂರು ಆಸ್ಪತ್ರೆ ಪ್ರಥಮ ವಾರ್ಷಿಕೋತ್ಸವ
FREE CONSULT
ಡಾ. ಅಮರ್‌ಜೀತ್ ಈ ತಾಂಡೂರು
MBBS, MS, FACS, FALS, FIAGES, FMAS
Consultant G.I.Bariatric & Laparoscopic Surgeon
ಮೊದಲ ವಾರ್ಷಿಕೋತ್ಸವ ನಿಮಿತ್ತ ಉಚಿತ ಆರೋಗ್ಯ ತಪಾಸಣೆ
ಹೆಸರು ನೋಂದಾಯಿಸಿದವರಿಗೆ ಮೊದಲ ಆದ್ಯತೆ
TANDUR HOSPITAL
1st ANNIVERSARY
REGISTER NOW
ಡಾ.ಸ್ನೇಹಾ ಅಮರ್‌ಜೀತ್ ತಾಂಡೂರು
MBBS, MD (DVL)
Dermatologist, Aesthetician & Dermatosurgeon
ಮೊಡವೆ | ತೊನ್ನು | ಸೋರಿಯಾಸೀಸ್ | ಫಂಗಲ್ | ಸೋಂಕುಗಳು | ಕುಷ್ಠ ರೋಗ | ಚರ್ಮದ ಬೆಳವಣಿಗೆಗಳು | ಕೂದಲು ಉದುರುವಿಕೆ | ಬಟ್ಟತಲೆ | ಬಿಳಿಕೂದಲು | ಅತಿಯಾಗಿ ಬೆವರುವುದು | ಉಗುರಿನ ಸಮಸ್ಯೆಗಳು | ಅಲರ್ಜಿಗಳು | ಚರ್ಮದ ದದ್ದುಗಳು | ಮಕ್ಕಳ ಚರ್ಮದ ಸಮಸ್ಯೆಗಳು ಇತ್ಯಾದಿ
ಬೆಳಿಗ್ಗೆ: 10 ರಿಂದ ಸಂಜೆ 5ರವರೆಗೆ ಮೊ: 9324871459
ಸರ್ದಾರ್ ಪಟೇಲ್ ರೋಡ್, ಪಟೇಲ್ ನಗರ, ಹೊಸಪೇಟೆ



ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
Follow for vijayanagara dist. updates


## ಮೈಕ್ರೋ ನ್ಯೂಸ್

### 50 ಹಾಸಿಗೆಗಳ ಕ್ರಿಟಿಕಲ್ ಕೇರ್ ಆಸ್ಪತ್ರೆ ನಿರ್ಮಾಣಕ್ಕೆ ಭೂಮಿಪೂಜೆ ಇಂದು

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ತಾಲೂಕು 50 ಹಾಸಿಗೆಗಳ ಕ್ರಿಟಿಕಲ್ ಕೇರ್ ಯೂನಿಟ್ ಆಸ್ಪತ್ರೆ ನಿರ್ಮಾಣ ಕಾಮಗಾರಿ ಭೂಮಿಪೂಜೆ ಕಾರ್ಯಕ್ರಮವನ್ನು ಸೆಪ್ಟೆಂಬರ್ 28ರಂದು ಬೆಳಿಗ್ಗೆ 11 ಗಂಟೆಗೆ ನಗರದ ಸಂಡೂರ್ ಬೈಪಾಸ್ ರಸ್ತೆ ಹತ್ತಿರದ ವಿಜಯನಗರ ಜಿಲ್ಲೆ ಆಸ್ಪತ್ರೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಂದಾಜು ರೂ.28.52 ಕೋಟಿ ಮೊತ್ತದ ಈ ಕಾಮಗಾರಿಯ ಭೂಮಿಪೂಜೆಗೆ ಶಾಸಕ ಹೆಚ್.ಆರ್.ಗವಿಯಪ್ಪ ಚಾಲನೆ ನೀಡಲಿದ್ದಾರೆ.

### ಅಂಗನವಾಡಿ ಹುದ್ದೆಗಳ ನೇಮಕಾತಿಯಲ್ಲಿ ಮಧ್ಯವರ್ತಿಗಳ ಆಮಿಷಕ್ಕೆ ಒಳಗಾಗದಿರಿ

**ಹಂಪಿ ಟೈಮ್ಸ್ ಕೂಡ್ಲಿಗಿ**

ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ನೇಮಕಾತಿ ವಿಚಾರದಲ್ಲಿ ಮದ್ಯವರ್ತಿಗಳಿಗೆ ಹಣ ನೀಡಿ ಮೋಸ ಹೋಗಬಾರದು ಎಂದು ಕೂಡ್ಲಿಗಿ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾದಿಕಾರಿಗಳು ತಿಳಿಸಿದ್ದಾರೆ.




ಕೂಡ್ಲಿಗಿ ತಾಲೂಕಿನಲ್ಲಿ ಖಾಲಿ ಇದ್ದ, ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗೆ ಈ ಹಿಂದೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿತ್ತು, ನೇಮಕಾತಿಯ ವಿಚಾರದಲ್ಲಿ ಮಧ್ಯವರ್ತಿಗಳು ಹಾಗೂ ಕೆಲವು ಸಂಘಟನೆಯ ಹೆಸರುಗಳನ್ನು ಬಳಸಿಕೊಂಡು ಸಾರ್ವಜನಿಕರಲ್ಲಿ ನೇಮಕಾತಿ ಮಾಡಿಕೊಡುತ್ತೇವೆ ಎಂದು ಹಣ ವಸೂಲಿ ಮಾಡುತ್ತಿರುವುದು ಮತ್ತು ಅಧಿಕಾರಿಗಳಲ್ಲಿ ಹಣದ ಆಮಿಷ ತೋರಿಸಿ ನೇಮಕಾತಿ ಮಾಡುವಂತೆ ಮಧ್ಯವರ್ತಿಗಳು ನೇಮಕಾತಿಯ ಪ್ರಕ್ರಿಯೇಯಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಕೇಳಿ ಬರುತ್ತಿದೆ. ನೇಮಕಾತಿ ಪ್ರಕ್ರಿಯೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಪರಿಶೀಲಿಸಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನೇಮಕಾತಿ ಮಾಡಲಾಗುವುದು. ನೇಮಕಾತಿಯು ಸಂಪೂರ್ಣವಾದ ಪಾರದರ್ಶಕತೆಯಿಂದ ಕೂಡಿರುತ್ತದೆ. ಹಾಗಾಗಿ ಸಾರ್ವಜನಿಕರು ಯಾವುದೇ ಮೋಸದ ಜಾಲಕ್ಕೆ ಒಳಗಾಗಬಾರದು ಎಂದು ಪ್ರಕಟಣೆ ತಿಳಿಸಿದೆ.

# ಸಂಡೂರ ಗಿರಿ ಹಸಿರು ಪ್ರವಾಸಿಗರ ಆಕರ್ಷಣೆ

## ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ ಹೇಳಿಕೆ



**ಹಂಪಿ ಟೈಮ್ಸ್ ಬಳ್ಳಾರಿ**

ನಮ್ಮ ಸುತ್ತಮುತ್ತಲಿನ ಐತಿಹಾಸಿಕ ಸ್ಥಳಗಳನ್ನು ತಪ್ಪದೇ ವೀಕ್ಷಿಸಬೇಕು. ಪ್ರವಾಸಿ ತಾಣಗಳ ವೀಕ್ಷಣೆಯಿಂದ ಮನಸ್ಸಿಗೆ ಆಹ್ಲಾದಕ ಅನುಭವ ದೊರೆಯುತ್ತದೆ ಎಂದು ಡಾ.ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪ್ರವಾಸೋದ್ಯಮ ಇಲಾಖೆ ಹಾಗೂ ಹೋಟೆಲ್ ಮಾಲೀಕರ ಸಂಘದ ಸಹಯೋಗದೊಂದಿಗೆ ನಗರದ ಐತಿಹಾಸಿಕ ಕೋಟೆ ಮುಂಭಾಗದ ಆವರಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿಶ್ವ ವಿಖ್ಯಾತ ಹಂಪಿ ಹಾಗೂ ತುಂಗಾಭದ್ರಾ ಡ್ಯಾಂ ಪ್ರವಾಸಿ ತಾಣಗಳು ಬಳ್ಳಾರಿ ಜಿಲ್ಲೆಯನ್ನು ಬೇರ್ಪಟ್ಟವು. ಆದರೂ ನಮ್ಮ ಜಿಲ್ಲೆಯಲ್ಲಿ ಸಂಡೂರಿನ ಕುಮಾರಸ್ವಾಮಿ ದೇವಸ್ಥಾನ, ಸ್ವಾಮಿಮಲೈ ಅರಣ್ಯ ಕ್ಷೇತ್ರ, ನಾರಿಹಳ್ಳ ಜಲಾಶಯ, ಬಳ್ಳಾರಿಯ ಐತಿಹಾಸಿಕ ಕೋಟೆ, ಮಿಂಚೇರಿ ಬೆಟ್ಟ, ಸಂಗನಕಲ್ಲು ಗುಡ್ಡ, ಸಿರುಗುಪ್ಪದ ಕೆಂಚನಗುಡ್ಡ, ಕುರುಗೋಡಿನ ದೊಡ್ಡ ಬಸವೇಶ್ವರ ದೇವಸ್ಥಾನ ಸೇರಿದಂತೆ ಅನೇಕ ಪ್ರವಾಸಿ ತಾಣಗಳಿದ್ದು, ಜನಸಾಮಾನ್ಯರು ಈ ಸ್ಥಳಗಳಿಗೆ ಭೇಟಿ ನೀಡಿ ಸ್ಥಳೀಯ ಪ್ರವಾಸಿ ತಾಣಗಳನ್ನು ವೀಕ್ಷಿಸಬೇಕು ಎಂದರು.

> **ಶಾಲಾ ಮಕ್ಕಳಿಗೆ ಪ್ರವಾಸ**
>
> ಜಿಲ್ಲೆಯ ಡಿಎಂಎಫ್ ಅನುದಾನಡಿ 9ನೇ ತರಗತಿ ಶಾಲಾ ಮಕ್ಕಳಿಗೆ "ಆಡಳಿತ ಪ್ರವಾಸೋದ್ಯಮ" ಯೋಜನೆಯಡಿ ಸಂಡೂರು ನೈಸರ್ಗಿಕ ಪ್ರವಾಸಿ ತಾಣ, ಜಿಲ್ಲಾಧಿಕಾರಿ ಕಚೇರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ, ರಾಬರ್ಟ್ ಬ್ರೂಸ್‌ಫೂಟ್ ಪ್ರಾಕ್ತನ ವಸ್ತು ಸಂಗ್ರಾಲಯ ಸೇರಿದಂತೆ ನಾನಾ ಸ್ಥಳಗಳಿಗೆ ವಿದ್ಯಾರ್ಥಿಗಳನ್ನು ಕರೆದೊಯ್ಯಲಾಗುತ್ತದೆ ಎಂದು ಅವರು ತಿಳಿಸಿದರು.

**ಬಳ್ಳಾರಿಯಲ್ಲೂ ರಾಷ್ಟ್ರಪಿತರ ಚಿತಾಭಸ್ಮ:** ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಚಿತಾಭಸ್ಮವು ನಗರದ ರೇಡಿಯೋ ಪಾರ್ಕ್‌ನ ಪಿಸಿಹೆಚ್ ಕಾಲೇಜು ಆವರಣದಲ್ಲಿರುವುದು ವಿಶೇಷವಾಗಿದೆ. ಈ ಹಿಂದೆ ಗಾಂಧೀಜಿಯವರು ನಗರದ ರೈಲ್ವೇ ನಿಲ್ದಾಣದಲ್ಲಿ ತಂಗಿದ್ದು, ನಂತರ ಸಂಡೂರಿಗೆ ತೆರಳಿ ಅಲ್ಲಿನ ಪ್ರಕೃತಿ ಸೌಂದರ್ಯ ಸವೆದು "ಸೀ ಸಂಡೂರು ಇನ್ ಸೆಪ್ಟಂಬರ್" ಎನ್ನುವ ಮಾತನ್ನು ಹೇಳಿದ್ದು ಸಂತಸದ ವಿಷಯವಾಗಿದೆ ಎಂದರು.

ಮುಂದಿನ ಪೀಳಿಗೆಯು ಇತಿಹಾಸ ಅರಿತುಕೊಳ್ಳಲು ಐತಿಹಾಸಿಕ ಪ್ರವಾಸಿ ತಾಣಗಳನ್ನು ವೀಕ್ಷಿಸಿ ಸಂರಕ್ಷಿಸಿ, ಪೋಷಣೆ ಮಾಡಬೇಕು ಎಂದು ತಿಳಿಸಿದರು.

ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್ ಅವರು ಮಾತನಾಡಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಮಾತನಾಡಿ, ಪ್ರತಿಯೊಬ್ಬರೂ ಪುಸ್ತಕದ ಓದಿನ ಜೊತೆಗೆ ಪ್ರವಾಸಿ ತಾಣಗಳಿಗೆ ಭೇಟಿ ನೀಡಿದಾಗ ಮಾತ್ರ ಜಗತ್ತಿನ ಸಾಂಸ್ಕೃತಿಕ, ಭೌಗೋಳಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಅರಿಯಲು ಸಾಧ್ಯವಾಗುತ್ತದೆ ಎಂದರು.

ಇದೇ ವೇಳೆ ಪ್ರವಾಸಿ ಮಿತ್ರ ರಕ್ಷಣಾ ಸಿಬ್ಬಂದಿಗಳಿಗೆ ಪ್ರಶಂಸೆ ಪತ್ರ ವಿತರಿಸಲಾಯಿತು. ಈ ಸಂದರ್ಭದಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಸಹಾಯಕ ಸಂರಕ್ಷಣಾಧಿಕಾರಿ ರವೀಂದ್ರ, ಹೋಟೆಲ್ ಮಾಲೀಕರ ಸಂಘದ ಕಾರ್ಯದರ್ಶಿ ವಿಕ್ರಮ್ ಪೋಲಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಪ್ರವಾಸೋದ್ಯಮ ಇಲಾಖೆಯ ಅಧಿಕಾರಿ ಶ್ರೀಹರಿ ಮಾಸನೂರು ಸೇರಿದಂತೆ ಸಿಬ್ಬಂದಿ, ಪ್ರವಾಸಿ ಮಾರ್ಗದರ್ಶಕರು ಹಾಗೂ ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಇತರರು ಉಪಸ್ಥಿತರಿದ್ದರು.

# ವರ್ಷದ ಅತ್ಯುತ್ತಮ ಕಂದಾಯ ಅಧಿಕಾರಿ-2024 ಪ್ರಶಸ್ತಿ ಪ್ರಧಾನ

## ಸಚಿವರಿಂದ ತಹಶೀಲ್ದಾರ್ ಎಂ.ಎಂ.ಶೃತಿ ಸ್ವೀಕಾರ



**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ತಾಲೂಕು ತಹಶೀಲ್ದಾರ್ ಶೃತಿ ಎಂ.ಮಳ್ಳಪ್ಪಗೌಡ್ರು ವರ್ಷದ ಅತ್ಯುತ್ತಮ ಕಂದಾಯ ಅಧಿಕಾರಿ-2024 ಪ್ರಶಸ್ತಿಗೆ ಭಾಜನರಾಗಿ, ಶುಕ್ರವಾರ ಬೆಂಗಳೂರಿನಲ್ಲಿ ಕಂದಾಯ ಸಚಿವ ಕೃಷ್ಣೇಬೈರಗೌಡರಿಂದ ಪ್ರಶಸ್ತಿ ಸ್ವೀಕರಿಸಿದರು. ಕಂದಾಯ ಇಲಾಖೆಯ ವಿವಿಧ ಸೇವೆಗಳನ್ನು ಸಾರ್ವಜನಿಕರಿಗೆ ಅತ್ಯುತ್ತಮವಾಗಿ ಒದಗಿಸಿದ ಕಂದಾಯ ಅಧಿಕಾರಿಗಳ ಶ್ರೇಷ್ಠ ಸೇವೆಯನ್ನು ಸರ್ಕಾರ ಗುರುತಿಸಿ ಈ ಪ್ರಶಸ್ತಿ ಪ್ರಧಾನ ಮಾಡಿದೆ ಎಂದು ಸಚಿವರು ತಿಳಿಸಿದ್ದಾರೆ.

# ಜನರ ಶ್ರೇಯೋಭಿವೃದ್ಧಿಗಾಗಿ ಗ್ಯಾರಂಟಿ ಯೋಜನೆಗಳು ಜಾರಿ

## ಸಂವಾದದಲ್ಲಿ ಸಂಸದ ಕೆ.ರಾಜಶೇಖರ ಹಿಟ್ನಾಳ ಹೇಳಿಕೆ



**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಸಂಸದರಾದ ಕೆ.ರಾಜಶೇಖರ ಹಿಟ್ನಾಳ ಅವರು ಸೆ.27ರಂದು ಕೊಪ್ಪಳ ಗ್ರಾಮೀಣ ಪ್ರದೇಶದಲ್ಲಿ ಪ್ರವಾಸ ಕೈಗೊಂಡು ಗ್ಯಾರಂಟಿ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗಿಯಾದರು.

ಕೊಪ್ಪಳ ತಾಲೂಕಿನ ಅಳವಂಡಿ ಗ್ರಾಮದ ಡಾ.ಬಿ.ಆರ್ ಅಂಬೇಡ್ಕರ್ ಭವನದಲ್ಲಿ ಸೆ. 27ರಂದು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಸಂಸದರು, ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮಿ, ಗೃಹಜ್ಯೋತಿ, ಯುವನಿಧಿ, ಶಕ್ತಿ ಹಾಗೂ ಅನ್ನಭಾಗ್ಯ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ ನಡೆಸಿ, ಆಯಾ ಯೋಜನೆಗಳ ಫಲಾನುಭವಿಗಳಿಗೆ ಸರ್ಕಾರದ ಸಹಾಯಧನ ಮತ್ತು ಇನ್ನಿತರ ಸೌಕರ್ಯಗಳು ಸಮರ್ಪಕವಾಗಿ ತಲುಪುತ್ತಿರುವುದರ ಬಗ್ಗೆ ಖಚಿತಪಡಿಸಿಕೊಂಡರು.

ಇದಕ್ಕು ಮೊದಲು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಂಸದರು, ಸರ್ಕಾರವು ಜನರ ಶ್ರೇಯೋಭಿವೃದ್ಧಿಗಾಗಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ. ಸರ್ಕಾರದ ಈ ಸದುದ್ದೇಶ ಈಡೇರಿದೆಯೇ ಇಲ್ಲವೇ, ಜನರ ನಿರೀಕ್ಷೆ ಏನು ಎಂಬುದರ ಬಗ್ಗೆ ಫಲಾನುಭವಿಗಳಿಂದಲೇ ಅಭಿಪ್ರಾಯ ಪಡೆಯಲು ಹಾಗೂ ಗ್ಯಾರಂಟಿ ಯೋಜನೆಗಳಿಂದ ವಂಚಿತರಾದ ಫಲಾನುಭವಿಗಳಿಗೆ ಯೋಜನೆಗಳ ಮಾಹಿತಿ ತಲುಪಿಸುವುದಕ್ಕಾಗಿ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ರಾಜ್ಯ ಸರ್ಕಾರದ 5 ಗ್ಯಾರಂಟಿ ಯೋಜನೆಗಳಿಂದ ಜನಜೀವನ ಆರ್ಥಿಕವಾಗಿ ಅಭಿವೃದ್ಧಿಯಾಗಿದೆ. ಆಯಾ ಯೋಜನೆಗಳಿಗೆ ಸಂಬಂಧಿಸಿದ ಇಲಾಖೆಗಳ ಅನುಷ್ಠಾನ ಅಧಿಕಾರಿಗಳು ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಹೆಚ್ಚಿನ ಮುತುವರ್ಜಿ ವಹಿಸಬೇಕು. ಅರ್ಹ ಫಲಾನುಭವಿಗಳು ಯೋಜನೆಗಳಿಂದ ವಂಚಿತರಾಗಿದ್ದರೆ ಅಂತಹ ಫಲಾನುಭವಿಗಳು ತಾಲ್ಲೂಕಿನ ಗ್ಯಾರಂಟಿ ಯೋಜನೆಗಳ >>4

# ಹೊಯ್ಸಳ, ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

## 05 ರಿಂದ 18 ವರ್ಷದೊಳಗಿನ ಮಕ್ಕಳಿಗೆ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ

**ಹಂಪಿ ಟೈಮ್ಸ್ ಕೊಪ್ಪಳ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಅಸಾಧಾರಣ ಸಾಧನೆ ಮಾಡಿದ ಮಕ್ಕಳಿಗೆ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಪ್ರಸಕ್ತ 2024-25ನೇ ಸಾಲಿಗಾಗಿ 05 ರಿಂದ 18 ವರ್ಷದೊಳಗಿನ ಮಕ್ಕಳಿಗೆ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ ಯೋಜನೆಯಡಿ ಅಸಾಧಾರಣ ಸಾಧನೆ ಮಾಡಿದ ಮಕ್ಕಳನ್ನು ಪ್ರೋತ್ಸಾಹಿಸಲು ಆಯ್ಕೆ ಕ್ಷೇತ್ರಗಳಿಗೆ ನೀಡುವ ಸಲುವಾಗಿ ನಾವೀನ್ಯತೆ (ಇನ್ನೊವೇಷನ್) ತಾರ್ಕಿಕ (ಸ್ಕೊಲಾಸ್ಟಿಕ್) ಸಾಧನೆಗಳು, ಕಲೆ, ಸಾಂಸ್ಕೃತಿಕ & ಸಂಗೀತ, ಕ್ರೀಡೆ (ಸ್ಪೋರ್ಟ್ಸ್) ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಕ್ಕಳು ಅರ್ಜಿ ಸಲ್ಲಿಸಬಹುದಾಗಿದೆ. ಪ್ರಕರಣವು ಆಗಸ್ಟ್-2023 ರಿಂದ ಜುಲೈ-2024 ರೊಳಗೆ ನಡೆದಿರಬೇಕು. ಪ್ರಶಸ್ತಿಗಾಗಿ ಜಿಲ್ಲಾ ಮಟ್ಟದಲ್ಲಿ ಪ್ರತಿಭೆಯನ್ನು ಗುರುತಿಸಿರಬೇಕು.

ಅರ್ಹ ಅಭ್ಯರ್ಥಿಗಳು ನಿಗದಿಪಡಿಸಿದ ಅರ್ಜಿ ನಮೂನೆಗಳನ್ನು ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೊಪ್ಪಳ ಇವರಿಂದ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಅಕ್ಟೋಬರ್ 30 ರೊಳಗೆ ಸಲ್ಲಿಸಬೇಕು. ನಿಗದಿತ ದಿನಾಂಕದ ನಂತರ ಸಲ್ಲಿಸಿದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.


HAMPI TIMES VIJAYANAGARA
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರಕ್ಕಾಗಿ ಆಲೋಚಿಸುತ್ತಿದ್ದೀರಾ ?
ಚಿಕ್ಕ ಮೊತ್ತ ದೊಡ್ಡ ಜಾಹೀರಾತು
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
90 ಸಾವಿರಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper
ಹಂಪಿ ಟೈಮ್ಸ್ ಇ-ಪೇಪರ್
ಹಂಪಿ ಟೈಮ್ಸ್ ವಿಸ್ತಾರ : ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

## ಬೆಳಕಿನ ಹಾದಿ


■ ಜಯಶ್ರೀ.ಎಂ.ಕರ್ಜಗಿ. ಹುಬ್ಬಳ್ಳಿ

ಜೀವನದಲ್ಲಿ ಬೇಸರಗೊಂಡ ಯುವಕನೋರ್ವ ಒಂದು ಪಟ್ಟಣದ ಬೀದಿ ಬೀದಿಗಳಲ್ಲಿ ಅಲೆದಾಡುತ್ತಿದ್ದ. ಅವನಿಗೆ ಇಡೀ ಜಗತ್ತು ಮೋಸದಿಂದ ತುಂಬಿದೆ ಎಂದೆನಿಸಿತ್ತು. ಅದಕ್ಕೆ ಕಾರಣವೂ ಇತ್ತು. ಆಪ್ತರು ಎಂದುಕೊಂಡ ಅನೇಕ ಸ್ನೇಹಿತರು ಇವನ ಬಳಿ ಹಣ ಇರುವವರೆಗೆ ಜೊತೆಗಿದ್ದರು. ಹಣವೆಲ್ಲಾ ಖಾಲಿಯಾದ ಬಳಿಕ ಅವನನ್ನು ಬಿಟ್ಟು ದೂರ



ಸರಿದರು. ಹಣ ಹಾಗೂ ಸ್ನೇಹಿತರ ಮದದಿಂದ ಜೀವನ ನಡೆಸುತ್ತಿದ್ದ ಈ ಯುವಕನಿಗೆ ಈಗ ಯಾರೂ ಇರಲಿಲ್ಲ. ದಿನದ ಒಪ್ಪೊತ್ತಿನ ಊಟಕ್ಕೂ ಗತಿ ಇಲ್ಲದಂತಾಗಿತ್ತು. ಇದ್ದ ಎಲ್ಲಾ ಹಣ ಕಳೆದುಕೊಂಡು ಪಟ್ಟಣದ ಬೀದಿ ಬೀದಿ ಅಲೆಯುತ್ತಿದ್ದ. ತನ್ನ ಹಳ್ಳಿಗೆ ಮರಳಲು ಸಹ ಕೈಯಲ್ಲಿ ಕಾಸಿಲ್ಲ. ದುಡಿಯಲು ಮನಸ್ಸಿಲ್ಲ. ಇದೆಲ್ಲಕ್ಕಿಂತ ಹೆಚ್ಚಾಗಿ ಇಂತಹ ಪರಿಸ್ಥಿತಿಯಲ್ಲಿ ಹಳ್ಳಿಗೆ ಏನು ಮಾಡಬೇಕೆಂಬ ಪ್ರಶ್ನೆ ಭೂತಾಕಾತವಾಗಿತ್ತು. ಅದಕ್ಕಾಗಿ ಅವನು ಸರಳ ಉಪಾಯ ಕಂಡುಕೊಂಡಿದ್ದ.

ಪಟ್ಟಣದ ಬೀದಿಗಳಲ್ಲಿ ಸುತ್ತಾಡುತ್ತಾ, ಅಲ್ಲಿ ಇಲ್ಲಿ ಭಿಕ್ಷೆ ಬೇಡಿ ಬಂದ ಹಣದಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ. ರಾತ್ರಿಯಾದೊಡನೆ ಸಮೀಪದ ದೇವಸ್ಥಾನ, ಬಸ್‌ನಿಲ್ದಾಣ ಅಥವಾ ರೈಲು ನಿಲ್ದಾಣದ ಬಳಿ ಮಲಗುತ್ತಿದ್ದ. ಅಲ್ಲಿ ತನ್ನವರೆನ್ನುವವರೂ ಯಾರೂ ಇರಲಿಲ್ಲ. ಎಲ್ಲವನ್ನೂ ಕಳೆದುಕೊಂಡವನಿಗೆ ಬದುಕಿನ ಭರವಸೆಯೂ ನಶಿಸುತ್ತಾ ಬಂದಿತ್ತು. ಹೀಗಿರುವಾಗ ಗಣೇಶನ ಹಬ್ಬ ಬಂದಿತ್ತು. ಗಲ್ಲಿ ಗಲ್ಲಿಗಳಲ್ಲೂ ಗಣೇಶನ ಪ್ರತಿಷ್ಠಾಪನೆ ಆಗಿತ್ತು. ಎಲ್ಲೆಡೆಯೂ ಅನ್ನ ಸಂತರ್ಪಣೆ, ಪ್ರಸಾದ ವ್ಯವಸ್ಥೆಗಳು ಇದ್ದವು. ಊಟಕ್ಕೆ ಯಾವುದೇ ಕೊರತೆ ಇರಲಿಲ್ಲ. ಮದ್ಯಾಹ್ನ ಮತ್ತು ರಾತ್ರಿ ಊಟದ ತಾಪತ್ರಯ ಇರಲಿಲ್ಲ.




ಒಂದು ದಿನ ಸಂಜೆ ಒಂದು ವೇದಿಕೆಯ ಬಳಿ ಪ್ರಸಿದ್ಧ ಪಂಡಿತರಿಂದ ಉಪನ್ಯಾಸವಿತ್ತು. ಇವನಿಗೆ ಉಪನ್ಯಾಸ ಬೇಕಿರಲಿಲ್ಲ. ಟೈಂಪಾಸ್ ಆಗಬೇಕಿತ್ತು ಮತ್ತು ರಾತ್ರಿ ಊಟದ ವ್ಯವಸ್ಥೆ ಆಗಬೇಕಿತ್ತು. ಹಾಗಾಗಿ ವೇದಿಕೆಯ ಬಳಿ ಇರುವ ಆಸನದಲ್ಲಿ ಕುಳಿತು ಕೊಂಡ. ಕಾರ್ಯಕ್ರಮ ಶುರುವಾಯಿತು. ಪಂಡಿತರ ಭಾಷಣವೂ ಶುರುವಾಯಿತು. ಕಣ್ಣು ಮುಚ್ಚಿ ಪಂಡಿತರ ಮಾತುಗಳನ್ನು ಆಲಿಸತೊಡಗಿದ. ಕಾರ್ಯಕ್ರಮ ಮುಗಿಯುವ ವೇಳೆಗೆ ಅವನ ಮನಸ್ಥಿತಿ ಸಂಪೂರ್ಣ ಬದಲಾಗಿತ್ತು. ಬದುಕಿನ ಬಗ್ಗೆ ನಶ್ವರತೆ ಆವರಿಸಿದ್ದ ಅವನಲ್ಲಿ ಆಶಾವಾದ ಮೊಳಕೆಯೊಡೆದಿತ್ತು. ಪಂಡಿತರು ಹೇಳಿದ ಮಾತುಗಳು ಅವನ ಜೀವನದ ದಿಕ್ಕನ್ನೇ ಬದಲಿಸಿದ್ದವು. ಅವು ಹೀಗಿವೆ.

ಜೀವನದಲ್ಲಿ ಹೂವು ಎಂದಿಗೂ ಎರಡು ಬಾರಿ ಅರಳುವುದಿಲ್ಲ. ಹಾಗೆಯೇ ಈ ಜನ್ಮ ಮತ್ತೆ ಮತ್ತೆ ಬರುವುದಿಲ್ಲ. ಬದುಕಿನಲ್ಲಿ ಸಾವಿರಾರು ಜನ ಸಿಕ್ಕರೂ ಮನಸ್ಸಿಗೆ ಎಲ್ಲರೂ ಇಷ್ಟವಾಗುವುದಿಲ್ಲ. ಇಷ್ಟವಾದವರನ್ನು ಒಮ್ಮೆ ಕಳೆದುಕೊಂಡರೆ ಅಂತವರು ಮತ್ತೆ ಸಿಗುವುದಿಲ್ಲ. ಸಂತೋಷ ಎನ್ನುವುದು ಹತ್ತು ಸಾವಿರ ರೂಪಾಯಿ ಖರ್ಚು ಮಾಡಿ, ಹತ್ತೂರು ಸುತ್ತಿದರೂ ಬರುವುದಿಲ್ಲ. ನಮ್ಮವರ ಜೊತೆಗೆ ಹತ್ತು ನಿಮಿಷ ಮನಸ್ಸು ಬಿಚ್ಚಿ ಮಾತನಾಡಿದರೆ ಸಾಕು ನಿಜವಾದ ಸಂತೋಷ ಸಿಗುತ್ತದೆ. ಇದ್ದಾಗಲೇ ಸಮಯಕೊಟ್ಟು ಮಾತನಾಡಬೇಕು. ಜೀವನದಲ್ಲಿ ಖಡ್ಗ ಚಿನ್ನದ್ದೇ ಆಗಿರಲಿ, ಕಬ್ಬಿಣದ್ದೇ ಆಗಿರಲಿಮ ಅದರ ಕೆಲಸ ಒಂದೇ ಆಗಿರುತ್ತದೆ. ಹಾಗೆಯೆ ಜೀವನದಲ್ಲಿ ಕೆಲವೊಬ್ಬರಿಗೆ ಎಷ್ಟೇ ಒಳ್ಳೆಯ ಸ್ಥಾನ ನೀಡಿದರೂ ಸಮಯ ಬಂದಾಗ ಅವರ ನಿಜ ಸ್ವರೂಪ ತಿಳಿಯುತ್ತದೆ. ಹಾಗೆಯೇ ಕನಸು ಕಾಣುವುದನ್ನು ಬಿಟ್ಟಾಗ ಬದುಕು ಸಾಯುತ್ತದೆ. ನಂಬುವುದನ್ನು ಬಿಟ್ಟಾಗ ಭರವಸೆಗಳು ಸಾಯುತ್ತವೆ. ಕಾಳಜಿ ವಹಿಸುವುದನ್ನು ಬಿಟ್ಟಾಗ ಪ್ರೀತಿ ಸಾಯುತ್ತದೆ. ಜೀವನದಲ್ಲಿ ಏಳು ಬೀಳುಗಳು ಸ್ವಾಭಾವಿಕ. ಕೆಟ್ಟದ್ದರ ಬಗ್ಗೆ ಸದಾ ಯೋಚಿಸುತ್ತಾ ಕುಳಿತರೆ ಮತ್ತಷ್ಟು ಕೆಳಗಿಳಿಯುತ್ತೇವೆ. ಆಶಾವಾದ ಬಳಸಿಕೊಂಡು ಮುನ್ನುಗ್ಗಿದರೆ ಬದುಕಿನ ಸುಂದರ ಮುಖ ಗೋಚರಿಸುತ್ತದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಭೂಮಿಯ ಗಾತ್ರ ದ್ವಿಗುಣವಾದರೆ.....

ನಾವೆಲ್ಲ ವಾಸಿಸುತ್ತಿರುವ ಮನೆ ಒಂದು ಗೋಳಾಕಾರದ ಕಲ್ಲು. ಅದು ಸೌರವ್ಯೂಹದ ಗೋಲ್ಡಿಲಾಕ್ ವಲಯದಲ್ಲಿದೆ. ಆವಿಯಾಗುವಷ್ಟು ಹೆಚ್ಚು ಉಷ್ಣವೂ ಅಲ್ಲದ, ಘನೀಭವಿಸುವಷ್ಟು ಹೆಚ್ಚು ಶೀತವೂ ಅಲ್ಲದ ಮಧ್ಯದ ವಲಯದಲ್ಲಿ ನಮ್ಮೆಲ್ಲರ ಮನೆಯಿದೆ. ಆದರೆ ಈ ನಮ್ಮ ಮನೆ ಇದ್ದಕ್ಕಿದ್ದಂತೆ ಗಾತ್ರದಲ್ಲಿ ದ್ವಿಗುಣವಾದರೆ ಏನಾಗುತ್ತೆ? ಈ ಪ್ರಶ್ನೆ ಸಹಜವಾಗಿ ಎಲ್ಲರ ಪ್ರಶ್ನೆಯಾಗಿದೆ. ಈ ಪ್ರಶ್ನೆಗೆ ಉತ್ತರವನ್ನು ಕೆಲವು ದುಷ್ಟಾಂತಗಳ ಮೂಲಕ ಕಂಡುಕೊಳ್ಳೋಣ.

**ದ್ರವ್ಯರಾಶಿ ಮತ್ತು ತೂಕ:** ಭೂಮಿಯ ಗಾತ್ರ ದ್ವಿಗುಣವಾದರೆ ಅದರ ಗುರುತ್ವಶಕ್ತಿಯೂ ದ್ವಿಗುಣವಾಗುತ್ತದೆ ಮತ್ತು ಭೂಮಿಯ ದ್ರವ್ಯರಾಶಿಯ ಈಗಿನ ದ್ರವ್ಯರಾಶಿಗಿಂತ 8 ಪಟ್ಟು ಹೆಚ್ಚಾಗುತ್ತದೆ. ಆಗ ಎಲ್ಲಾ ಪ್ರಾಣಿಗಳು ಸೇರಿದಂತೆ ನಮ್ಮ ತೂಕವೂ ಸಹ ಮೊದಲಿನ ತೂಕಕ್ಕಿಂತ ಎರಡು ಪಟ್ಟು ಹೆಚ್ಚುತ್ತದೆ. ತೂಕವನ್ನು ಬೆಂಬಲಿಸಲು ಮೂಳೆ ಮತ್ತು ಸ್ನಾಯುಗಳ ತೂಕವೂ ಹೆಚ್ಚುತ್ತದೆ.

**ಚಲನೆಯ ತೊಂದರೆ:** ಭೂಮಿಯ ಗಾತ್ರ ಹೆಚ್ಚಳದಿಂದ ಗುರುತ್ವವೂ ಹೆಚ್ಚುತ್ತದೆ ಎಂದು ಅರಿತೆವು. ಗುರುತ್ವ ಹೆಚ್ಚಾದರೆ ಭುಮಿಯ ಮೇಲೆ ನಾವು ನಡೆಯಲು, ಚಲಿಸಲು ತೊಂದರೆಯಾಗುತ್ತದೆ. ಗುರುತ್ವಾಕರ್ಷಣೆ ಹೆಚ್ಚು ಇರುವುದರಿಂದ ನಡೆಯಲು ಹೆಚ್ಚು ಶಕ್ತಿ ಬೇಕಾಗುತ್ತದೆ. ಬೆನ್ನಿನ ಮೇಲೆ ಇನ್ನೊಬ್ಬರನ್ನು ಹೊತ್ತು ಒಯ್ದಾಗ ಎಷ್ಟು ಶಕ್ತಿ ವ್ಯಯವಾಗುತ್ತದೆಯೋ ಅಷ್ಟೇ ಪ್ರಮಾಣದ ಶಕ್ತಿ ವ್ಯಯವಾಗುತ್ತದೆ. ಅದೇ ರೀತಿ ಪರಭಕ್ಷಕಗಳ ಚಲನೆಯೂ ಸಹ ತೊಂದರೆಯಾಗುತ್ತದೆ. ಓಡಲು ಆಗದೇ ಭೇಟೆಯಾಡುವುದು ಕಷ್ಟವಾಗುತ್ತದೆ.

**ಮರಗಳು ನಾಶ:** ಸಾಮಾನ್ಯವಾಗಿ ಮರವು ಎಷ್ಟು ಎತ್ತರವಾಗಿ ಬೆಳೆಯಬಲ್ಲದು? ವಾಸ್ತವವಾಗಿ ಮರದ ಬೆಳವಣಿಗೆಯು ಗುರುತ್ವಾಕರ್ಷಣೆಯಿಂದ ನಿಯಂತ್ರಿಸಲ್ಪಡುತ್ತದೆ. ಮರದ ತುತ್ತ ತುದಿಯವರೆಗೂ ನೀರನ್ನು ಸಾಗಿಸಲು ಬೇಕಾದ ಶಕ್ತಿಯು ದ್ಯುತಿಸಂಶ್ಲೇಷಣೆಯಿಂದ ಪಡೆಯುವ ಶಕ್ತಿಗಿಂತ ಕಡಿಮೆ ಇರುತ್ತದೆ. ಭೂಮಿಯ ಗಾತ್ರ ಹೆಚ್ಚಳವಾಗಿ ಗುರುತ್ವಾಕರ್ಷಣೆ ಹೆಚ್ಚಾದರೆ ನೀರನ್ನು ಸಾಗಿಸಲು ಹೆಚ್ಚು ಶಕ್ತಿ ಬೇಕಾಗುತ್ತದೆ. ಅಷ್ಟೊಂದು ಶಕ್ತಿಯನ್ನು ಉತ್ಪಾದಿಸುವ ಸಾಮರ್ಥ್ಯ ಮರಕ್ಕಿಲ್ಲ. ನೀರು ಸರಬರಾಜು ಇಲ್ಲದೇ ಮರಗಳು ನಾಶಹೊಂದುತ್ತವೆ.




ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper

**ಜ್ವಾಲಾಮುಖಿಗಳ ಸ್ಫೋಟ:** ಭೂಮಿಯ ಗಾತ್ರ ಹೆಚ್ಚಳದಿಂದ ಭೂಮಿಯೊಳಗೆ ಸ್ಥಿರ ಅಂಶಗಳ ಪ್ರಮಾಣ ಹೆಚ್ಚುತ್ತದೆ. ಇದು ಭೂಮಿಯೊಳಗೆ ಹೆಚ್ಚಿನ ತಾಪಕ್ಕೆ ಕಾರಣವಾಗುತ್ತದೆ. ಆಂತರಿಕ ಭೂ ತಾಪವು ಜ್ವಾಲಾಮುಖಿ ಚಟುವಟಿಕೆಗಳನ್ನು ಹೆಚ್ಚಿಸುತ್ತದೆ. ಪ್ರಪಂಚದಾದ್ಯಂತ ಸಾವಿರಾರು ವರ್ಷಗಳಿಂದ ಕೆಲವು ಸುಪ್ತ ಜ್ವಾಲಾಮುಖಿಗಳಿವೆ. ಆ ಎಲ್ಲಾ ಸುಪ್ತ ಜ್ವಾಲಾಮುಖಿಗಳು ಎಚ್ಚರಗೊಳ್ಳುತ್ತವೆ. ಜ್ವಾಲಾಮುಖಿಗಳ ಚಟುವಟಿಕೆ ಭೂಮಿಯ ಆಕಾರವನ್ನು ಬದಲಿಸುತ್ತದೆ. ವಾಯುಮಂಡಲವೂ ಸಹ ಬದಲಾವಣೆಗೊಂಡು ಹವಾಮಾನ ವೈಪ್ಯರೀತ್ಯಗಳಾಗುತ್ತವೆ.

**ಸುಧೀರ್ಘ ಹಗಲು:** ಭೂಮಿಯ ಗಾತ್ರ ಹೆಚ್ಚಳದಿಂದ ಕೋನೀಯ ಆವೇಗ ಸಂರಕ್ಷಿಸಲ್ಪಡುತ್ತದೆ. ಆಗ ಭೂಗ್ರಹದ ಚಲನೆಯ ವೇಗ 32 ಪಟ್ಟು ಕಡಿಮೆಯಾಗುತ್ತದೆ. ಇದರಿಂದ ಭೂಮಿಯ ಪರಿಭ್ರಮಣ ಅವಧಿ ಹೆಚ್ಚುತ್ತದೆ. ಪರಿಣಾಮವಾಗಿ ಹಗಲಿನ ಪ್ರಮಾಣ ಹೆಚ್ಚುತ್ತದೆ. ಒಂದು ದಿನದ ಅವಧಿ ತಿಂಗಳಿನ ಲೆಕ್ಕಕ್ಕೆ ಸಮನಾಗಬಹುದು. ಆಗ ಬೆಳಕು ಮತ್ತು ಕತ್ತಲೆಗಳ ಸಮಯ ಹೆಚ್ಚುತ್ತದೆ. ಬೃಹತ್ ಉಷ್ಣತೆಯು ಸೃಷ್ಟಿಸುವ ಬಿರುಗಾಳಿ, ಶಕ್ತಿಶಾಲಿಯಾದ ಕಟ್ಟಡಗಳನ್ನು ಸಮತಟ್ಟಾಗಿಸುತ್ತದೆ.

ಗಾಳಿಯ ಒತ್ತಡ : ವಾಯುಮಂಡಲವೂ ಗಾತ್ರದಲ್ಲಿ ದುಪ್ಪಟ್ಟಾಗುತ್ತದೆ. ಗಾಳಿಯ ಒತ್ತಡ ದ್ವಿಗುಣವಾಗುತ್ತದೆ. ಹೆಚ್ಚಿನ ಗಾಳಿಯು ಉಸಿರಾಡಲು ಸಹಾಯಕವಾಬಲ್ಲದು. ಅಲ್ಲದೇ ಹೆಚ್ಚಿನ ಆಮ್ಲಜನಕವು ಮೆದುಳಿಗೆ ರವಾನೆಯಾಗುತ್ತದೆ. ದಟ್ಟವಾದ ಗಾಳಿಯು ಹಕ್ಕಿಗಳ ಹಾರುವಿಕೆಗೆ ಸಹಾಯವಾಗಬಲ್ಲದು. ಆದಾಗ್ಯೂ ಗುರುತ್ವಾಕರ್ಷಣ ಹೆಚ್ಚಳದಿಂದ ಭೂಮೇಲ್ಮೈ ನೀರಿನ ಪ್ರಮಾಣವು ಕಡಿಮೆಯಾಗುತ್ತದೆ.




### ಆಧುನಿಕ ರಂಗ ಪ್ರಯೋಗಗಳಲ್ಲಿ ನೈಜಾಭಿನಯಗಳ ಬಗ್ಗೆ ಜಾಗತಿಕ ರಂಗತಜ್ಞನ ಶೋಧನೆಗಳನ್ನು ಕನ್ನಡಕ್ಕೆ ತಂದ ಅಪರೂಪದ ಕೃತಿ

# ಪಾತ್ರ ಪ್ರವೇಶ

'ಶ್ರೀಧರ ಹೆಗ್ಗೋಡು' ನೀನಾಸಂನಲ್ಲಿ ರಂಗಶಿಕ್ಷಕರಾಗಿ, ನಟರಾಗಿ, ನಿರ್ದೇಶಕರಾಗಿ,ನಾಟಕಗಳಜೊತೆಗೆಸಿನಿಮಾಕ್ಷೇತ್ರದಲ್ಲಿಯೂಸಂಗೀತ ಸಂಯೋಜಕರಾಗಿ (ಸೂಜಿದಾರ ಸಿನಿಮಾ) ರಂಗಭೂಮಿ ಮತ್ತು ಬೆಳ್ಳಿತೆರೆಯ ಹಲವು ಆಯಾಮಗಳಲ್ಲಿ ಪ್ರಭುತ್ವ ಪಡೆದವರು, ಪ್ರಯಾಣ ಎಂಬ ಹೆಸರಿನರಂಗತಂಡದ ಮೂಲಕ ಕರ್ಣಾದರ್ಶ (ಕುಮಾರವ್ಯಾಸ ಭಾರತಕಥಾಧಾರಿತ), ಕೊಳಲು ಭೂಮಿಗೀತ (ಅಡಿಗರಕಾವ್ಯಾಧಾರಿತ) ಪ್ರದರ್ಶನಗಳನ್ನು ನಾಡಿನಾದ್ಯಂತ ನೀಡಿದ್ದಾರೆ, ಸಾಹಿತ್ಯದಲ್ಲಿಅನುವಾದದತ್ತ ಹೊರಳಿದ ಆಸಕ್ತಿಯಿಂದಾಗಿ ತಿರುಕವಕ್ಕಿಗಳು (ಟಾಗೋರರ ಸ್ಟ್ರೇಬರ್ಡ್), ಹೆನ್ರಿಇಬ್ಸನ್‌ನ ಬ್ರಾಂಡ್ ಮತ್ತು ಅಂಟನ್ ಚೆಕಾವ್‌ನ ಸೀಗಲ್ ನಾಟಕಗಳು, ಪಾಡ್‌ಕಾಸ್ಟ್ ಸರಣಿಯಲ್ಲಿ ವಿವಿಧ ದೇಶಗಳ ಲೇಖಕರ ಮಹತ್ವದ ಲೇಖನಗಳನ್ನು ಕನ್ನಡಕ್ಕೆತಂದಿದ್ದಾರೆ. ತಮ್ಮದೇ ಆದ ಭಿನ್ನಷಡ್ಜ ಎಂಬ ಹೋಮ್ ಸ್ಟುಡಿಯೋವನ್ನು ಮೈಸೂರಿನಲ್ಲಿ ನಿರ್ಮಿಸಿದ್ದಾರೆ.


ಅನಿರೀಕ್ಷಿತವಾಗಿ ಸಂಭವಿಸಿದ ತೀವ್ರವಾದ ಅಪಘಾತದಿಂದಾಗಿ ಸರಿಸುಮಾರು ಎರಡು ದಶಕಗಳ ಕಾಲ ಶರೀರದ ಅಂಗಗಳ ಸ್ವಾಧೀನವನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದರೂ, ತಮ್ಮ ಮನೋಸ್ಥೈರ್ಯದಿಂದ ವ್ಹೀಲ್‌ಚೇರ್ ಮೇಲಿದ್ದುಕೊಂಡೇ ಇ-ರೀಡರ್ ಮೂಲಕ ರಷ್ಯಾದಕೋನ್ ಸ್ತಂತಿನ್ ಸ್ತಾನಿಸ್ಲಾವ್ ಸ್ಕಿ ಮೂಲ ಕೃತಿಯನ್ನು ಓದಿ, ಅನುವಾದಕ್ಕೆ ಮುಂದಾದವರು. ಅನುವಾದವನ್ನು ರೆಕಾರ್ಡ್ ಮಾಡಿಕೊಳ್ಳುತ್ತಾ ಗೆಳೆಯರ ಮೂಲಕ ಬರಹಕ್ಕಿಳಿಸಿದ ಅವರಗಟ್ಟಿತನದ ಫಲಿತವಾಗಿ ಪ್ರಸ್ತುತಕೃತಿಬೆಂಗಳೂರಿನ ಥಿಯೇಟರ್ ತತ್ಕಾಲ್ ಬುಕ್ಸ್‌ತಂಡದಿಂದ ಪ್ರಕಟ ಗೊಂಡ 'ಪಾತ್ರಪ್ರವೇಶ' ಕನ್ನಡ ರಂಗಾಭ್ಯಾಸಿಗಳ ಮತ್ತು ರಂಗಾಸಕ್ತರ ಕೈಸೇರಿದೆ. ಹೆಗ್ಗೋಡು ಇವರ ಈ ಪ್ರಯತ್ನಗಳಿಗೆ ನಾನು ಸಮಸ್ತ ಕನ್ನಡಿಗರ ಪರವಾಗಿ ವಿಶೇಷವಾಗಿ ಕೃತಜ್ಞತೆಗಳನ್ನು ಹೇಳುವುದು ಅತಿಶಯವೆನಿ ಸಲಾರದು.



ಡಾ.ಎನ್.ಎಂ.ಗಿರಿಜಾಪತಿ,
ಸಾಹಿತಿಗಳು, ಮೈಸೂರು,

Scan For Digital Colourful
HAMPI TIMES E-paper

ನಟರಾಗುವುದೆಂದರೆರಂಗ ಪ್ರದರ್ಶನಗಳಿದ್ದಾಗ ಮಾತ್ರ ಆತ ಅಲ್ಲಿನ ಅಗತ್ಯಗಳಿಗೆ ತಕ್ಕಂತೆ ಕೆಲಸ ಮಾಡಿದರೆ ಸಾಕೆಂಬ ಭಾವಗಳು ಸಾಮಾನ್ಯ ವಾಗಿಕಂಡು ಬರುತ್ತವೆ. ಆದರೆ ಜಗತ್ತಿನರಂಗ ತಜ್ಞರಲ್ಲಿ ಪ್ರಸಿದ್ಧನಾದ ರಷ್ಯಾದಕೋನ್ ಸ್ತಂತಿನ್ ಸ್ತಾನಿಸ್ಲಾವ್ ಸ್ಕಿ (1863 – 1938) ನಟನೊಬ್ಬ ಜೀವಮಾನದುದ್ದಕ್ಕೂ ಕೆಲಸ ಮಾಡಬೇಕು, ಮನಸ್ಸನ್ನು ವಿಸ್ತರಿಸಿಕೊಳ್ಳಬೇಕು, ಕ್ರಮ ಬದ್ಧ ವಾಗಿತನ್ನ ಕೌಶಲಗಳನ್ನು ಅಭ್ಯಾಸ ಮಾಡಬೇಕು, ತನ್ನ ವ್ಯಕ್ತಿತ್ವವನ್ನು ವಿಸ್ತರಿಸಿಕೊಳ್ಳಬೇಕು; ಅವನು ಯಾವುತ್ತೂ ಹತಾಶನಾಗುವಂತಿಲ್ಲ ಮತ್ತುತನ್ನ ಮುಖ್ಯ ಉದ್ದೇಶವನ್ನು ತ್ಯಜಿಸುವಂತಿಲ್ಲ, ಆ ಉದ್ದೇಶ ಎನ್ನ ಎಲ್ಲ ಸಾಮರ್ಥ್ಯದೊಡನೆ ಕಲೆಯನ್ನು ಪ್ರೀತಿಸುವುದು ಮತ್ತು ನಿಸ್ವಾರ್ಥಿಯಾಗಿ ಅದನ್ನು ಪ್ರೀತಿಸುವುದೆಂದು ಹೇಳಿದ್ದಾನೆ. ಈತನ ಒಟ್ಟಾರೆ ಬರವಣಿಗೆಗಳು 1951–64ರ ನಡುವೆ ಎಂಟು ಸಂಪುಟಗಳಲ್ಲಿ ಪ್ರಕಟಗೊಂಡಿದ್ದು,ಜಗತ್ತಿನ ವಿವಿಧ ಭಾಷೆಗಳಿಗೆ ಅನುವಾದಗೊಂಡಿವೆ. ಅವುಗಳಲ್ಲಿ ಕನ್ನಡದರಂಗ ಚಿಂತಕ ಕೆ.ವಿ. ಸುಬ್ಬಣ್ಣಈತನ 'An Actor Prepares' ಕೃತಿಯನ್ನು ರಂಗದಲ್ಲಿ ಅಂತರಂಗವೆಂದು (1982) ಅನುವಾದಿಸಿದ್ದಾರೆ, ಇವರ ನಂತರದಲ್ಲಿ ಸರಿ ಸುಮಾರು 40 ವರ್ಷಗಳ ತರುವಾಯ 'Building A Character' ಎನ್ನುವ ಕೃತಿಯನ್ನು ಅದೇ ನೀನಾಂಸನಲ್ಲಿ ಪ್ರಾಧ್ಯಾಪಕರಾಗಿದ್ದ ಶ್ರೀಧರ್ ಹೆಗ್ಗೋಡು 'ಪಾತ್ರ ಪ್ರವೇಶ' ಹೆಸರಿನಲ್ಲಿ ಕನ್ನಡಕ್ಕೆ ತಂದಿದ್ದಾರೆ. ಈ ಎರಡೂ ಕೃತಿಗಳು ವಾಸ್ತವವಾದಿ ರಂಗ ಪ್ರಯೋಗಗಳ ಹಿನ್ನೆಲೆಯಲ್ಲಿ ನಟರ ಅಂತರಂಗ ಮತ್ತು ಬಹಿರಂಗ (ಮಾನಸಿಕ ಮತ್ತು ಶಾರೀರಿಕ) ಪರಿಪೂರ್ಣ ಪ್ರಮಾಣದ ಸಿದ್ಧತೆಗಳಿಗೆ ಜಾಗತಿಕರಂಗ ಚಿಂತಕರಂಗ ಚಿಂತಕ ಸ್ತಾನಿಸ್ಲಾವ್ ಸ್ಕಿ ನಡೆಸಿದ ಶೋಧದ ಫಲಶೃತಿಗಳಾಗಿವೆ.




16 ಅಧ್ಯಾಯಗಳಿಂದ ಕೂಡಿದ 'ಪಾತ್ರ ಪ್ರವೇಶ' ನಟರಾದವರಿಗೆ ಲಕ್ಷ್ಯದಲ್ಲಿರಬೇಕಾದ ಅವರ ದೈಹಿಕ ಚಹರೆಗಳು, ವ್ಯಕ್ತಿತ್ವ, ಅಂಗಭಂಗಿಗಳ ಮೇಲಣ ನಿಯಂತ್ರಣಗಳ ಚರ್ಚೆಯಿಂದ ಮೊದಲಾಗುತ್ತದೆ. ನಂತರ ನಟರಿಗೆ ಇರಬೇಕಾದ ಸ್ವಎನ್ನಬಹುದಾದ ವ್ಯಕ್ತಿತ್ವದಜೊತೆಗೆ ಪಾತ್ರದ ವ್ಯಕ್ತಿತ್ವವಾಗುವ ಬಗೆ, ಪಾತ್ರದ ವಿವಿಧ ನಮೂನೆಗಳು, ಅಭಿವ್ಯಕ್ತಿಸುವ ಕ್ರಮ, ಚಲನೆಯ ಗತಿಗಳು, ಹತೋಟಿ, ಸಂಭಾಷಣೆ, ಸಾಹಿತ್ಯ (ಹಾಡು), ಕಾಕು, ಮೌನ ಪಾತ್ರದ ಒಟ್ಟಾರೆ ದೃಷ್ಟಿಕೋನಗಳನ್ನು ಪರಿಭಾವಿಸುವ ಕ್ರಮ, ಮಾತು ಮತ್ತು ನಟನೆಯಲ್ಲಿನ ಅನುಶೀಲನ ವಿಧಾನ ಇತ್ಯಾದಿಗಳೊಂದಿಗೆ ರಂಗ ಚಟುವಟಿಕೆಯ ಸಮ್ಮೋಹನ ಸಾಮರ್ಥ್ಯ, ನೈತಿಕತೆಗಳ ಬಗ್ಗೆಯೂ ಸ್ತಾನಿಸ್ಲಾವ್ ಸ್ಕಿ ಪ್ರಸ್ತಾಪಿಸಿದ್ದಾರೆ. ಆದರೆ ಈ ಪ್ರಸ್ತಾವನೆಗಳಲ್ಲಿ ಅನುವಾದಕರಾದ ಶ್ರೀಧರ್ ಹೆಗ್ಗೋಡು ಭಾರತೀಯ ರಂಗ ಮಾಧ್ಯಮ ಮತ್ತು ಕನ್ನಡ ಭಾಷಿಕ ಪರಿಸರಕ್ಕೆ ಅನ್ವಯಿಸಿದ ಸಂಗತಿಗಳನ್ನು ಕೈಬಿಟ್ಟಿದ್ದಾರೆಂದು ಬಿ. ಆರ್. ವೆಂಕಟರಮಣ ಐತಾಳ್ ಗುರುತಿಸಿದ್ದಾರೆ.

ಸ್ತಾನಿಸ್ಲಾವ್ ಸ್ಕಿಯು ಪ್ರತಿಪಾದಿಸಿದ 'ಅಭಿನಯ ಮಾರ್ಗವು'ಆತನ ರಂಗಭೂಮಿಯ ಅನುಭವ ಮತ್ತು ಒಡನಾಟಗಳನ್ನು ರಂಗಪಾಠಗಳನ್ನಾಗಿ ಕಟ್ಟಿಕೊಡುವ ವಿನೂತನ ಮಾದರಿ, ರಂಗಾಭ್ಯಾಸದ ಹಲವು ಮಾದರಿಗಳನ್ನು ವಿವಿಧ ಆಯಾಮಗಳ ಮೂಲಕ ರಂಗಾಭ್ಯಾಸಿಗಳಿಗೆ ಸಿದ್ಧಮಾಡಿದ ಪಠ್ಯ. ರಂಗಭೂಮಿಗೆ ಸಂಬಂಧಿಸಿದ ಈ ಬಗೆಯ ಪಠ್ಯಗಳು ಹೊಸವೇನಲ್ಲ ಪ್ರಾಚೀನರಲ್ಲಿ ನಮ್ಮಲ್ಲಿನ ಭರತ ಮುನಿ, ಪಾಶ್ಚಾತ್ಯರ ಮೊಟೊಕಿಯೊ ಆರ್ವಾಚೀನರಲ್ಲಿ ಬ್ರೆಕ್ಟ್, ಗ್ರೋಟೊವಸ್ಕಿ ಇವರ ಸಾಲಿನಲ್ಲಿಕಾಣುವ ಸ್ತಾನಿಸ್ಲಾವ್ ಸ್ಕಿ ಮುಂತಾದವರು ಗಮನ ಸೆಳೆಯುತ್ತಾರೆ. ಜಗತ್ತಿನ ಜನಪದ, ಸಾಂಪ್ರದಾಯಿಕ ರಂಗಭೂಮಿಯ ಒಡಲೊಳಗಿಂದ ಹುಟ್ಟಿಕೊಂಡ ಹವ್ಯಾಸಿ ರಂಗಪ್ರಯೋಗಗಳು ಹೊಸ ಹೊಸ ದಾರಿಗಳನ್ನು ಸೃಷ್ಟಿಸಿ ಕೊಳ್ಳುತ್ತಾ ತಮ್ಮ ಹರಹನ್ನು ವಿಸ್ತರಿಸಿಕೊಂಡವು. ಇಲ್ಲೆಲ್ಲ ನಟನೆ ಕುರಿತ ನಿರ್ವಚನ ಕ್ರಮಗಳು ಸಹ ಕ್ಷಿಪ್ರವಾಗಿ ಬದಲಾಗತೊಡಗಿದವು. ನಟನೆ ಎನ್ನುವ ಪದವು ವಾಸ್ತವದಲ್ಲಿ ಸುಳ್ಳು, ಕೃತ್ರಿಮ, ನೈಜವಲ್ಲದ್ದು ಎನ್ನುವ ವಾಚ್ಯಾರ್ಥಗಳಿಂದ ಕೂಡಿದ ಪ್ರಯೋಗ, (ಇದರ ನಿಷ್ಪತ್ತಿಗಳ ಶಾಸ್ತ್ರೀಯ ಚರ್ಚೆಗಳ ವಿಚಾರ ಬೇರೆ) ಈ ಸುಳ್ಳು, ಕೃತ್ರಿಮತೆ, ನೈಜತೆಯಿರದ ನಟನೆ ಸತ್ವದಲ್ಲಿ ನಿಜ ಎನ್ನುವಂತಿರಬೇಕು ಎನ್ನುವುದು ಸ್ತಾನಿಸ್ಲಾವ್ ಸ್ಕಿಯ ಅಭಿಮತ. ಹಾಗಾಗಿ ಈತ ರೂಢಿಗೆ ತರಲು ಪ್ರಯತ್ನಿಸಿದ ಅಭಿನಯ ಪದ್ಧತಿಯನ್ನು ವಾಸ್ತವವಾದಿ ನೆಲೆಯಲ್ಲಿ ನೋಡಲಾಗುತ್ತಿದೆ. ತನ್ನಕಾಲದ ಪ್ರಸಿದ್ಧ ವಾಸ್ತವವಾದಿ ನಾಟಕಕಾರರಾದ ಅಂಟೆನ್ ಚೆಖಾವ್, ಹೆನ್ರಿಕ್‌ಇಬ್ಸೆನ್, ಮಾಕ್ಸಿಮ್‌ಗಾರ್ಕಿ ಮುಂತಾದವರ ನಾಟಕಗಳನ್ನು ರಂಗದ ಮೇಲೆ ತರುವಾಗ ನಟರು ಎದುರಿಸುತ್ತಿದ್ದ ಸಂಕಷ್ಟಗಳನ್ನು ಕಂಡ ಈತನಿಗೆ ಹೊಸ ಪದ್ಧತಿಯ ಅವಶ್ಯಕವೆನಿಸಿದೆ ಎನ್ನಿಸುತ್ತಿತ್ತು. ಇದುವರೆವಿಗೂ ರೂಢಿಯಲ್ಲಿದ್ದ ಹುಸಿ ಭಾವಗಳ, ಭಾವ ತೀವ್ರತೆಯ, ಅತಿರಂಜಿತ ಕಲ್ಪನೆಗಳನ್ನು ಹೊತ್ತು ಸಾಗುತ್ತಿದ್ದ ಅಭಿನಯಗಳು ಇಲ್ಲಿ ಸಹಕಾರಿಯಾಗುವಂತಿರಲಿಲ್ಲ. ಈ ವಾಸ್ತವ ರಂಗ ಪ್ರದರ್ಶನ ಎನ್ನುವುದು ಬಹುಸೂಕ್ಷ್ಮವಾದ ಭಾವಸ್ತರಗಳನ್ನು, ವಿಚಾರದ ನೆಲೆಗಳನ್ನು ಆಗುಮಾಡಿಕೊಳ್ಳುವ, ನಟರಲ್ಲಿ ತಾನು ಅಭಿನಯಿಸುತ್ತಿದ್ದೇನೆ ಎನ್ನುವ ಪರಿಕಲ್ಪನೆಗಳಿಗಿಂತ ತಾನು ಹಾಗೆಯೇ ಪಾತ್ರದಂತೆ, ಪಾತ್ರವಾಗಿಯೇ ಇದ್ದೇನೆ ಅಂದರೆ ಪರಕಾಯ ಪ್ರವೇಶ ಅಲ್ಲ, ಬದಲಿಗೆ ಪರಕಾಯವೇ ಆಗಲಿದ್ದೇನೆ, ಆಗಿದ್ದೇನೆ ಎನ್ನವುದರ ನಟನಾ ಪದ್ಧತಿಗಳು ಅಗತ್ಯವಿವೆ ಎಂದು ಈತನಿಗೆ ಅನಿಸಿತ್ತು. ವಾಸ್ತವ ಸತ್ವಗಳೇ ಆಭಿನಯದ ಜೀವಾಳವಾಗಬೇಕು, ವಸ್ತು, ಕಥೆ, ಪಾತ್ರ ವಿಚಾರಗಳ ನಿಜಸತ್ವ ಅಭಿನಯದಲ್ಲಿ ಕಾಣುವಂತಾಗಬೇಕೆಂಬ ಹಪಹಪಿಕೆಗಳು ಆತನನ್ನು ಕಾಡತೊಡಗಿ ದ್ದವು. ಅದಕ್ಕಾಗಿ ಆತನಿರಂತರವಾಗಿ ಶೋಧಿಸತೊಡಗಿದ, ಮಾಸ್ಕೋದಲ್ಲಿನ ಆರ್ಟ್ ಥಿಯೇಟರ್‌ನ ರಂಗತಂಡಗಳ ಮೂಲಕ ಹೊಸಬಗೆಯ ನಾಟಕಗಳಿಗೆ, ಹೊಸ ಪ್ರಯೋಗ ವಿಧಾನಗಳನ್ನು ಮುಂದು ಮಾಡಿದ ಆತನ ಪ್ರಯೋಗ ತಂತ್ರಗಳು ಯಶಸ್ವಿಯಾದವು. ಇವು ರಂಗಜಗತ್ತಿಗೆ ಹೊಸ ಮಾರ್ಗಗಳನ್ನು ಹಾಕಿಕೊಡುತ್ತಾ ಜಾಗತಿಕ ರಂಗತಜ್ಞರನ್ನು ಇತ್ತ ಸೆಳೆದವು. ಇದರ ಫಲವಾಗಿ ಸ್ತಾನಿ ಸ್ಲಾವ ಸ್ಕಿ 'An Actor Prepares' ನಟರು ಬಹಿರಂಗ ಹಾವ ಭಾವಗಳ ಪ್ರದರ್ಶನಕ್ಕಿಂತ ಅಂತರಂಗದಲ್ಲಿಯೇ ಅಭಿನಯಕ್ಕೆ ತಯಾರಿಯಾಗುವ ಅಂದರೆ ನಟರ ಮನಸ್ಸು, ಭಾವ, ಸಂವೇದನೆ, ಕಲ್ಪನೆ ಮತ್ತು ಅಂತಸ್ತರಗಳಲ್ಲಿ ನಡೆಸಬೇಕಾದ ಅಭ್ಯಾಸ ಕ್ರಮಗಳತ್ತ ಬೆಳಕು ಬೀರಿತು, ಇದರಿಂದ ನಟರಲ್ಲಿ ಹದುಳಗೊಂಡ ಭಾವಸ್ಮೃತಿ, ಕಲ್ಪನಾ ಶೀಲತೆ, ಸತ್ಯವಂತಿಕೆ ಮತ್ತು ಸುಪ್ತಪ್ರಜ್ಞೆಯ ಆಯಾಮಗಳು ರಂಗತಜ್ಞರನ್ನು ಆಕರ್ಷಿಸಿದವು. ಹಾಗಾಗಿ ಈ ಕೃತಿ ನಟನೆಯ ಕೈಪಿಡಿ ಎಂದು ಮನ್ನಣೆ ಪಡೆದುಕೊಂಡಿತು.

ಹಂಪಿ ಟೈಮ್ಸ್
HAMPI TIMES

ಶನಿವಾರ / Saturday 28.09.2024



## ಕವಿ ಮನಸು

### ಗೆಲುವಿನ ದಾರಿ

ಗೆಲುವಿನ ದಾರಿ ಸುಲಭವಲ್ಲ
ಪರಿಶ್ರಮ ಬೇಕು ದಿನವೆಲ್ಲ
ತಾಳ್ಮೆ ಬೇಕು ಹೃದಯವೆಲ್ಲ
ಚತುರತೆ ಇರಲಿ ಮನದಲಿ।

ಸತತ ಪರಿಶ್ರಮ ಬೇಕು ಬಾಳಲಿ
ಸ್ಫೂರ್ತಿ ಇರಲಿ ಕಾಯಕದಲ್ಲಿ
ಶಾಂತಿ ತಾಳ್ಮೆ ನಿತ್ಯವೂ ಇರಲಿ
ಆಶಾ ಭಾವನೆ ಹೃದಯದಲ್ಲಿರಲಿ।

ದೃಢತೆ ಮೈ ಮನದಲ್ಲಿರಲಿ
ಗೆಲುವಿನ ನಂಬಿಕೆ ಇರಲಿ
ಸಾಧನೆಯಲ್ಲಿ ನಂಬಿಕೆ ಬರಲಿ
ನೀ ಕಾಣು ಸಾಧನೆಯ ದಾರಿ।

– ಚಂದ್ರಶೇಖರಯ್ಯ ರೋಣದಮಠ.

### ಮಹಾಕಾಳಿ ಮಾತೆಯ ದರ್ಶನ

ಬನ್ನಿ ನೋಡಿರಿ ಶಕ್ತಿ ಪೀಠದ
ಕಾಳಿ ಮಾತೆಯ ಮಂದಿರ
ಪರಮಹಂಸರಿಗೊಲಿದ ತಾಯಿಯು
ನೋಡಲೆನಿತಿದು ಸುಂದರ

ದುಷ್ಟ ಶಕ್ತಿಯ ಮಣಿಸಲೋಸುಗ
ಉಗ್ರ ರೂಪವ ತಳೆದಳು
ಭಕ್ತಿ ಭಾವದಿ ಭಜಿಸಲಾಕೆಯು
ಸೌಮ್ಯ ರೂಪದಿ ಬರುವಳು

ನೂಕು ನುಗ್ಗಲು ಇರುವ ತಾಣವು
ಬಹಳ ಜತನವು ಬೇಕಿದೆ
ಎಂದು ನುಡಿದರು ಮಾರ್ಗದರ್ಶಕ
ಕೊಂಚ ಭಯವದು ಮನದಲೆ

ಏನಿದಚ್ಚರಿ ಮಾತೆ ಮಾಯೆಯೊ
ಖಾಲಿ ಇದ್ದಿತು ದೇಗುಲ
ದಿವ್ಯ ದರ್ಶನ ನಮಗೆ ದೊರೆಯಿತು
ಧನ್ಯವೆನಿಸಿತು ಮನದೊಳ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಕಾಲ ನಿರ್ಣಯ

ಉಟ್ಟ ಅರಿವೆಗಳನೆಲ್ಲ ಕಿತ್ತು
ಬೆತ್ತಲೆಯಾದೆಯ ಮನುಜ
ಎತ್ತ ಹೋಗಬೇಕೆಂಬುದನರಿಯೆ
ಕತ್ತಲೆ ಆವರಿಸಿದೆ ಮನದ ತುಂಬಾ

ಸುತ್ತ ನೋಡುತಲಿ ವಿದ್ಯಮಾನ
ಕೆಟ್ಟು ಹೋಯಿತೇ ಒಳ ಮನ
ಬಟ್ಟೆ ಇದ್ದರೆಷ್ಟು ಮೈಯ ಮೇಲೆ
ಚಿಂತೆ ಮಾಡಲೇಕೆ ಇಂದು ನಾಳೆ

ತೀರಲಾರವೋ ಕಷ್ಟಗಳ ಮಾಲೆ
ಅಷ್ಟ ಮದಗಳು ಮನದೊಳಗೆ
ಗುಡುಗು ಮಿಂಚು ನಿಂತ ಮೇಲೆ
ಇಳೆ ತುಂಬಾ ಭರಪೂರ ಮಳೆ

ಕಷ್ಟ ಸುಖಗಳ ಮಿಳಿತ ಚಕ್ರದ ಸುತ್ತ
ಚಕ್ರ ತಿರುಗಿ ಕಷ್ಟ ಸುಖ ಕೆಳಗೆ ಮೇಲೆ
ಕಷ್ಟ ಶಾಶ್ವತವಲ್ಲ ಸುಖ ಶಾಶ್ವತವಲ್ಲ
ಕಾಲ ನಿರ್ಣಯದಂತೆ ಬದುಕಬೇಕಲ್ಲ

– ಕೆ ಎಂ ಬಸವರಾಜ
ನಿವೃತ್ತ ಇಂಜನಿಯರ್, ಹೊಸಪೇಟೆ




**ಗೂಡಿನಿಂದ ಹಾರಿ ಹೊರಬಂದ ಪಕ್ಷಿಗಳಂತೆ ಪತಿ–ಪತ್ನಿಯರಿಬ್ಬರು ತಮ್ಮದೇ ಆದ ಮನೆಯಲ್ಲಿ ವಾಸಿಸುತ್ತಾ ಮಕ್ಕಳನ್ನು ಪಡೆದು ಸಂಸಾರದ ಹೊಣೆ ಹೊರುತ್ತಾರೆ.ಆಗಾಗ ತನ್ನ ತಂದೆಯ ಮನೆಗೆ ಹೋಗಿ ಅವರ ಸುಖ ದುಃಖಗಳನ್ನು ವಿಚಾರಿಸುವ, ಹಬ್ಬ ಹರಿದಿನಗಳಲ್ಲಿ, ಶುಭ ಸಮಾರಂಭಗಳಲ್ಲಿ ಮಾತ್ರ ಬಂಧುವಿನಂತೆ ತನ್ನ ಕುಟುಂಬದೊಂದಿಗೆ ಭೇಟಿ ಕೊಡುವ ಮಗ ಮಾನಸಿಕ ಅಭದ್ರತೆಯನ್ನು, ತನ್ನ ಕುಟುಂಬಕ್ಕಾಗಿ ಏನೂ ಮಾಡಲಾಗದ ಮುಜುಗರ ಮತ್ತು ಅಸಹಾಯಕತೆಗಳಲ್ಲಿ ತೊಳಲಾಡುತ್ತಾನೆ......**

# ಗೌರಿಗೆ ಗೊತ್ತೇ ಗಂಡಸರ ದುಃಖ!?

ತಂದೆಯಾಗಿ, ಸೋದರನಾಗಿ, ಪತಿಯಾಗಿ, ಪ್ರೇಮಿಯಾಗಿ, ಸ್ನೇಹಿತನಾಗಿ, ಮಗನಾಗಿ ಹೀಗೆ ಒಂದಲ್ಲ ಒಂದು ರೀತಿಯಲ್ಲಿ ನಮ್ಮ ಜೀವನದ ಪ್ರಮುಖ ಪಾತ್ರಧಾರಿಯಾಗಿರುವ ಪುರುಷ ತನ್ನ ಜೊತೆಗಿರುವ ತಾಯಿ, ಸೋದರಿ, ಪತ್ನಿ, ಮಗಳು, ಸ್ನೇಹಿತೆ, ಪ್ರೇಮಿ ಹೀಗೆ ತನ್ನ ಜೀವನದಲ್ಲಿ ಬರುವ ಎಲ್ಲರನ್ನು ರಕ್ಷಿಸಲು ಬಯಸುವುದು ಸಹಜವಾಗಿದೆ. ಆದ್ದರಿಂದಲೇ ಹಲ ಕೆಲವು ವಿಷಯಗಳಲ್ಲಿ ಅವರು ಹೆಣ್ಣು ಮಕ್ಕಳನ್ನು ಕೆಲ ವಿಷಯಗಳನ್ನು ಮಾಡದಿರುವಂತೆ ವಿರೋಧಿಸುತ್ತಾರೆ ಕೂಡ.

ಪುರುಷರ ಈ ಮಾನಸಿಕತೆಯನ್ನು ಸಹಜವಾಗಿಯೇ ವಿರೋಧಿಸುವ ಹೆಣ್ಣು ಮಕ್ಕಳು ಪುರುಷರ ಪ್ರತಿಬಂಧಿಸುವಿಕೆಯ ಹಿಂದಿನ ಕಾರಣವನ್ನು ಅರಿಯಲು ಬಹಳಷ್ಟು ಬಾರಿ ಸೋಲುತ್ತಾರೆ. ನಾವು ಹೆಣ್ಣುಮಕ್ಕಳಾಗಿರುವುದರಿಂದಲೇ ನಮ್ಮನ್ನು ಹೀಗೆ ಕಂಟ್ರೋಲ್ ಮಾಡುತ್ತಾರೆ ಎಂಬ ಕೋಪ, ಅಸಹನೆ ಹೆಣ್ಣು ಮಕ್ಕಳನ್ನು ಕಾಡುತ್ತದೆಯೇ ಹೊರತು ಪುರುಷರ ಈ ಪ್ರತಿಬಂಧಿಸುವಿಕೆಯ ಹಿಂದೆ ಇರುವ ಪ್ರೀತಿ, ಅಕ್ಕರೆ ಮತ್ತು ಕಾಳಜಿಗಳನ್ನು ಗುರುತಿಸುವಲ್ಲಿ ಎಡವುತ್ತಾರೆ.

ಮಹಿಳಾಪರ ಚಿಂತನೆ ಮತ್ತು ಜಾಗೃತಿಗಳ ಕುರಿತು ಯೋಚಿಸುವ ಮಹಿಳೆಯರು ಕೂಡ ಈ ಮಾತಿಗೆ ತಮ್ಮ ಸಹಮತವನ್ನು ವ್ಯಕ್ತಪಡಿಸುತ್ತಾರೆ, ಕಾರಣ ಅತ್ಯಂತ ಸರಳ ಮತ್ತು ಸ್ಪಷ್ಟವಾಗಿದ್ದು ಪುರುಷನಾಗಿರುವುದು ಅಷ್ಟೊಂದು ಸುಲಭವಲ್ಲ.

ಚಿಕ್ಕಂದಿನಲ್ಲಿ ಅತ್ಯಂತ ಪ್ರೀತಿ ಅಕ್ಕರೆಗಳಲ್ಲಿ ಬೆಳೆಯುವ ಪುರುಷನಿಂದ ಈ ಸಮಾಜ ಬಹಳಷ್ಟನ್ನು ನಿರೀಕ್ಷಿಸುತ್ತದೆ.ಚೆನ್ನಾಗಿ ಓದಿ ಒಳ್ಳೆಯ ಅಂಕಗಳನ್ನು ಗಳಿಸಲೇಬೇಕು, ಬದುಕಿನ ಉತ್ತಮ ನಿರ್ವಹಣೆಗಾಗಿ ನೌಕರಿಯನ್ನು ಹಿಡಿಯಲೇಬೇಕು. ಅಕಸ್ಮಾತ್ ಉದ್ಯಮ ಇಲ್ಲವೇ ವ್ಯಾಪಾರ ವ್ಯವಹಾರ ಕ್ಷೇತ್ರದಲ್ಲಿ ಪಾಲಕರು ಕಾರ್ಯನಿರ್ವಹಿಸುತ್ತಿದ್ದರೆ ಹದಿಹರೆಯಕ್ಕೆ ಬರುತ್ತಿದ್ದಂತೆ ಹೈಸ್ಕೂಲಿನಲ್ಲಿದ್ದಾಗ ರಜಾ ದಿನಗಳಲ್ಲಿ, ಕಾಲೇಜು ಕಲಿಯುವಾಗ ಕಾಲೇಜು ಅವಧಿ ಮುಗಿದ ಮೇಲೆ ಸ್ನೇಹಿತರ ಜೊತೆ ಸಿನಿಮಾ, ಸುತ್ತಾಟ ಎಂದು ಓಡಾಡುವುದನ್ನು ಬಿಟ್ಟು ಪಾಲಕರ ವ್ಯಾಪಾರ ವ್ಯವಹಾರಗಳಲ್ಲಿ, ಹೊಲಗದ್ದೆಗಳಲ್ಲಿ, ಒಕ್ಕಲುತನದ ಇತರ ಕೆಲಸಗಳಲ್ಲಿ ತಮ್ಮನ್ನು ತಾವು ಬಲವಂತವಾಗಿ ತೊಡಗಿಸಿಕೊಳ್ಳುತ್ತಾರೆ. ಡಿಗ್ರಿ ಮುಗಿದ ಮೇಲಂತೂ ಮತ್ತೆ ಯಾಕೆ ನೌಕರಿ ಹುಡುಕುವುದು ನಮ್ಮದೇ ಕೌಟುಂಬಿಕ ಉದ್ಯೋಗ, ವ್ಯವಹಾರವನ್ನು ಮುಂದುವರಿಸಿಕೊಂಡು ಹೋಗು ಎಂಬ ಪಾಲಕರ ಒತ್ತಾಯಕ್ಕೆ ಮಣಿದು ತಮ್ಮ ಕನಸುಗಳಿಗೆ ತಿಲಾಂಜಲಿ ನೀಡುತ್ತಾರೆ.

ಮನೆಯಲ್ಲಿ ಅಕಸ್ಮಾತ್ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದರೆ ರಜಾ ದಿನಗಳಲ್ಲಿ ಸಣ್ಣಪುಟ್ಟ ಕೆಲಸಗಳನ್ನು ಮಾಡಿ ತಮ್ಮ ಮುಂದಿನ ವಿದ್ಯಾಭ್ಯಾಸಕ್ಕೆ ಹಣವನ್ನು ಹೊಂದಿಸುತ್ತಾರೆ. ಮನೆಯಲ್ಲಿ ಹಿರಿಯ ಮಗನಾಗಿದ್ದರಂತೂ ವಿದ್ಯಾಭ್ಯಾಸಕ್ಕೆ ಅರ್ಧದಲ್ಲಿಯೇ ಕೈ ಮುಗಿದು ತಂದೆ ತಾಯಿಯ ದುಡಿತಕ್ಕೆ ತಾವು ಕೂಡ ಕೈ ಜೋಡಿಸುತ್ತಾರೆ.

ಮತ್ತೆ ಕೆಲಬಾರಿ ಓದು ಮುಗಿಸಿ ನೌಕರಿಗಾಗಿ ಅಲ್ಲಲ್ಲಿ ಅರ್ಜಿ ಹಾಕಿ ಕಾಯುತ್ತಾ ಕುಳಿತಾಗ ಬೇರೆಯವರನ್ನು ಬಿಡಿ, ಸ್ವತಹ ತಮ್ಮ ಮನೆಯವರ ದೃಷ್ಟಿಯಲ್ಲಿ ಕೂಡ ದಂಡಪಿಂಡಗಳಂತೆ ತೋರುತ್ತಾರೆ. ಅಂತಹ ಸಮಯದಲ್ಲಿ ಅವರು ಹೆಚ್ಚಿನದೇನನ್ನಾದರೂ ಅಪೇಕ್ಷಿಸಿದರೆ 'ದುಡಿಯಂಗಿಲ್ಲ ದುಃಖ ಪಡಂಗಿಲ್ಲ' ಎಂಬ ಮೂದಲಿಕೆ ಖಂಡಿತಾ. ಒಟ್ಟಿನಲ್ಲಿ "ಉದ್ಯೋಗಂ ಪುರುಷ ಲಕ್ಷಣಂ" ಎಂಬ ಮಾತಿನಂತೆ ಆತ ಯಾವುದಾದರೊಂದು ವೃತ್ತಿಯಲ್ಲಿ ತೊಡಗಿಸಿಕೊಳ್ಳಲೇಬೇಕು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಕೆಲಸ ಬೇಗನೆ ದೊರೆಯದೆ ಹೋದಾಗ, ತನ್ನ ಕೆಲಸದಲ್ಲಿ ಹೆಚ್ಚಿನ ಪ್ರಗತಿಯನ್ನು ಆತ ಸಾಧಿಸದೆ ಇದ್ದಾಗ ಆತನನ್ನು ಹಂಗಿಸುವವರಿಗೇನು ಕಮ್ಮಿಯಿಲ್ಲ. ಆತನಿಗೂ ಮನಸ್ಸಿದ್ದು ಆತನೂ ತೊಂದರೆಗಳನ್ನು ಅನುಭವಿಸುತ್ತಾನೆ, ಆತನಿಗೂ ನೋವಾಗುತ್ತದೆ. ಆತನ ಕಣ್ಣುಗಳಲ್ಲಿಯೂ ನೀರು ತುಂಬುತ್ತದೆ,ಆದರೆ ಈ ಸಮಾಜ ಕಲಿಸಿರುವ ಗಂಡಸು ಅಳಬಾರದು, ಹೆಣ್ಣು ಹುಡುಗಿಯಂತೆ ಅಳುವ 'ಹೆಣ್ಣಿಪ್ಪಿ' ಎಂಬ ಹೀಯಾಳಿಕೆಯ ಪಾಠ ಆತನ ಕಣ್ಣೀರನ್ನು ಅಲ್ಲಿಯೇ ಇಂಗಿಸುವ ಮೂಲಕ ಆತನನ್ನು ಸಂವೇದನಾರಹಿತನನ್ನಾಗಿ ಮಾಡುತ್ತದೆ . 'ಅಳುವ ಗಂಡಸನ್ನು ನಂಬಬಾರದು' ಎಂಬ ಮಾತು ಆತನ ಕಣ್ಣೀರನ್ನು ಉಡಾಫೆ, ಗಂಭೀರ ಮತ್ತು ಕಠೋರತೆಯ ಮುಖವಾಡಗಳ ಹಿಂದೆ ಮುಚ್ಚಿಡುತ್ತದೆ. ಮನಃಸ್ಫೂರ್ತಿಯಾಗಿ ನಗಲು, ನೋವಾದಾಗ ಅಳಲು ಸಾಧ್ಯವಾಗದ ಪರಿಸ್ಥಿತಿಯನ್ನು ಹೊಂದಿರುವ ಪುರುಷ 'ಕಲ್ಲು ಬಂಡೆ' ಎಂದು ಕರೆಸಿಕೊಂಡು ಅದರಲ್ಲಿಯೇ ಸಮಾಧಾನದ ನಿಟ್ಟುಸಿರನ್ನು ಬಿಡುತ್ತಾನೆ. ತಾಯಿ, ಸೋದರಿ, ಸ್ನೇಹಿತೆ, ಪ್ರೇಮಿ, ಹೆಂಡತಿ, ಮಗಳು ಹೀಗೆ ಎಲ್ಲರ ಸಂತೋಷಕ್ಕೆ ಕಾರಣವಾಗುವ ಗಂಡಸು ವೈಯಕ್ತಿಕ ಆಸೆ, ಆಕಾಂಕ್ಷೆಗಳನ್ನು ಹೊಂದುವುದೇ ಇಲ್ಲ.ಮನೆಯ ಹೆಣ್ಣು ಮಕ್ಕಳಿಗೆ ರೇಷ್ಮೆ ಸೀರೆ, ಹೊಸ ಬಟ್ಟೆಗಳನ್ನು ಕೊಡಿಸುವ ಗಂಡಸು ವರ್ಷಕ್ಕೆ ಒಂದು ಜೊತೆ ಬಟ್ಟೆ ತೆಗೆದುಕೊಂಡರೆ ಅದೇ ಹೆಚ್ಚು. ತೂತಾದ ಬನಿಯನ್ ಗಳನ್ನು ಶರ್ಟ್ ಮರೆಮಾಚುತ್ತದೆ. ಮಕ್ಕಳಿಗಾಗಿ ಶಾಲೆ ಕಾಲೇಜುಗಳ ಓದಿಗಾಗಿ ಹಾಸ್ಟೆಲ್ ಗಾಗಿ ಲಕ್ಷ ಲಕ್ಷ ಫೀ ಕಟ್ಟುವ ತಂದೆ ಒಡೆದ ಕನ್ನಡಕವನ್ನು ರಿಪೇರಿ ಮಾಡಿಸಲು ಹರಿದ ಚಪ್ಪಲಿಯನ್ನು ಮೆಟ್ಟಿ ಹಳೆಯ ಬೈಕಿನಲ್ಲಿ ನಿಸ್ಸಂಕೋಚವಾಗಿ ಓಡಾಡುತ್ತಾನೆ.

ತನ್ನ ಬದುಕಿನದ್ದಕ್ಕೂ ಮನೆ, ಮಕ್ಕಳು, ಸಂಸಾರ ಎಂದು ದುಡಿದ ಪತ್ನಿಯ ಅನಾರೋಗ್ಯಕ್ಕೆ ಆತನ ಪಿ.ಎಫ್. ಹಣವನ್ನು ಮುರಿಯಲು ಆತ ಹಿಂಜರಿಯುವುದಿಲ್ಲ ಆದರೆ ಅನಿವಾರ್ಯವಲ್ಲದ ಹೊರತು ತನ್ನ ಮೊಣಕಾಲ ನೋವಿಗೆ ವೈದ್ಯರು ಆಪರೇಷನ್ ಮಾಡಿಸಲು ಸಲಹೆ ನೀಡಿದರೂ "ಅಯ್ಯೋ! ವೈದ್ಯರಿಗೇನು ಹೇಳೇ ಹೇಳ್ತಾರೆ" ಎಂದು ತಳ್ಳಿ ಹಾಕುವ ಆತ ತನ್ನ ನೋವನ್ನು ಯಾರೊಂದಿಗೂ ಹಂಚಿಕೊಳ್ಳಲು ಬಯಸುವುದಿಲ್ಲ.

ಮಕ್ಕಳು ಚೆನ್ನಾಗಿ ಓದಿ ಒಳ್ಳೆಯ ಉದ್ಯೋಗಸ್ಥರಾದರೆ ಕುಟುಂಬಕ್ಕೆ ಕೀರ್ತಿ ತಂದರೆಂದು ಇಡಿಯ ಊರಿಗೆ ಹೇಳಿ ಬರುವ ಅಪ್ಪ ಮಕ್ಕಳ ಮುಂದೆ ಮಾತ್ರ ಗಂಭೀರತೆಯ ಮುಖವಾಡ ಹಾಕುತ್ತಾನೆ.

ಒಂದು ಹಂತದ ವಿದ್ಯಾಭ್ಯಾಸ ಕೊಡಿಸಿ, ಪೈಸೆ ಪೈಸೆ ಹಣ ಜೋಡಿಸಿ ಹೆಣ್ಣು ಮಕ್ಕಳ ಮದುವೆ ಮಾಡುವ ಅಪ್ಪ ಆಕೆಯನ್ನು ಗಂಡನ ಮನೆಗೆ ಕಳಿಸಿಕೊಡುವಾಗ ಮಾತ್ರ ಎದೆಯ ಮೇಲೆ ಭಾರವಾದ ಕಲ್ಲು ಹೊತ್ತಂತೆ ಭಾಸವಾಗುತ್ತಾನೆ... ಬಹುಶಃ ಆಗಲೇ ಆತನ ಕಣ್ಣಿಂದ ಮೊದಲ ಬಾರಿ ನಿಸ್ಸಂಕೋಚವಾಗಿ ನೀರು ಹರಿಯುತ್ತದೆ.

ಗಂಡು ಮಕ್ಕಳೊಂದಿಗೆ ತುಸು ಗಾಂಭೀರ್ಯದ ಬಿಗುಮಾನ ತೋರುವ ತಂದೆ ಹೆಣ್ಣು ಮಕ್ಕಳನ್ನು ಕಣ್ಣ ಗೊಂಬೆಯಂತೆ ಪ್ರೀತಿಸಿ ಕಾಪಾಡುತ್ತಾನೆ.... ಪಾಪದ ಗಂಡು ಮಕ್ಕಳು ತನ್ನ ಸಹೋದರಿಗೆ ದೊರೆಯುವ ಮಾನ್ಯತೆಯನ್ನು ಕಂಡು ಕರುಬುವುದನ್ನು ಬಿಟ್ಟು ಮತ್ತೇನು ಮಾಡಲು ಸಾಧ್ಯವಿಲ್ಲ... ಆದರೆ ಅಮ್ಮ ಹಾಗಲ್ಲ ಎಂಬುದೊಂದೇ ಆತನಿಗೆ ಸಮಾಧಾನದ ಸಂಗತಿ.



ತುಸು ವಯಸ್ಸಿಗೆ ಬರುತ್ತಿದ್ದಂತೆ ಅಮ್ಮನನ್ನು ಕಾಡಿ ಬೇಡಿ ಹಣ ವಸೂಲು ಮಾಡುವ ಮಕ್ಕಳ ಬೇಡಿಕೆಗಳನ್ನು ತಾಯಿ ಹುಸಿಮುನಿಸು ತೋರುತ್ತಲೇ ಈಡೇರಿಸುತ್ತಾಳೆ. ಅಪ್ಪನ ಕೆಂಗಣ್ಣಿಗೆ ಗುರಿಯಾಗದಂತೆ ಮಗನನ್ನು ಕಾಪಾಡುತ್ತಾಳೆ. ಮಗನ ಪಾಲಿಗೆ ಅಮ್ಮನ ಪ್ರೀತಿಯ ಬ್ಯಾಂಕ್ ನ ಖಾತೆಯಲ್ಲಿ ಜಮೆಯಾಗಿರುವ ಪ್ರೀತಿ, ವಾತ್ಸಲ್ಯ, ಅಕ್ಕರೆ ಮತ್ತು ಹಣ ಎಂದೂ ಖಾಲಿಯಾಗುವುದಿಲ್ಲ. ತಾಯಿಯ ವಾತ್ಸಲ್ಯದಲ್ಲಿ ಬೆಳೆದ ಗಂಡು ಮಗ ಉದ್ಯೋಗ ದೊರೆತ ಕೂಡಲೇ ತನ್ನ ಮೊದಲ ಸಂಬಳದಲ್ಲಿ ತಾಯಿಗೆ ಮೊದಲ ಉಡುಗೊರೆ ತಂದು ಕೊಡುತ್ತಾನೆ. ಒಡಹುಟ್ಟಿದವರಿಗೂ, ತಂದೆಗೂ ಕೂಡ ತರುವ ಆತನಿಗೆ ಮನೆಯ ಜವಾಬ್ದಾರಿಯ ಅರಿವು ಆರಂಭವಾಗುವುದು ಈಗಲೇ.

ತಿಂಗಳ ಮೊದಲ 15 ದಿನಗಳಲ್ಲಿಯೇ ಐದಂಕಿಯ ತನ್ನ ಸಂಬಳ ಕರಗಿ ಹೋದಾಗ,ಅತ್ಯಂತ ಕಡಿಮೆ ಸಂಬಳದಲ್ಲಿ ಇಡೀ ಮನೆಯ ಎಲ್ಲ ಸದಸ್ಯರ ಬೇಕು ಬೇಡಗಳು,ವಿದ್ಯಾಭ್ಯಾಸದ ಖರ್ಚು,ಆರೋಗ್ಯ, ಮನೆಯ ಖರ್ಚು ಹೀಗೆ ಎಲ್ಲವನ್ನು ನಿಭಾಯಿಸಿದ ತಂದೆಯ ಕುರಿತು ಗೌರವ ಪೂರ್ವಕ ಮೆಚ್ಚುಗೆ ಮೂಡುತ್ತದೆ. ಅವರ ದರ್ಪದ ಹಿಂದಿನ ಕಾಳಜಿ, ಗಾಂಭೀರ್ಯದ ಹಿಂದಿನ ಅಕ್ಕರೆಯ ಅರಿವಾಗುತ್ತದೆ.

ಸಹೋದರಿಯರ ಮದುವೆಗೆ ತಾನು ಕೂಡ ತಂದೆಯ ಜವಾಬ್ದಾರಿಗೆ ಹೆಗಲು ಕೊಡುವುದಲ್ಲದೇ ತನಗಿಂತ ಚಿಕ್ಕ ಸೋದರ ಸೋದರಿಯರಿಗೆ ಅವರು ಬಯಸಿದ ಕೋರ್ಸುಗಳನ್ನು ಓದಲು ತಂದೆಯ ಬಳಿ ಶಿಫಾರಸು ಮಾಡುವಷ್ಟು ಆತ್ಮಸ್ಥೈರ್ಯವನ್ನು ಹೊಂದುತ್ತಾನೆ ಮಗರಾಯ.

ವಯಸ್ಸಿಗೆ ಬಂದ ಮಗನಿಗೆ ತಂದೆ ತಾಯಿ ಮೊದಲ ಬಾರಿಗೆ ಆತ ಯಾರನ್ನಾದರೂ ಪ್ರೀತಿಸಿದ್ದಾನೆಯೇ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಂಡು ಸೂಕ್ತವಾದ ಕನ್ಯಾನ್ವೇಷಣೆಗೆ ತೊಡಗುತ್ತಾರೆ. ಹರೆಯಕ್ಕೆ ತಕ್ಕಂತಹ ಬಣ್ಣ ಬಣ್ಣದ ಕನಸುಗಳನ್ನು ಹೊಂದಿರುವ ಯುವಕ ಕೂಡ ತನ್ನ ವಿದ್ಯಾರ್ಹತೆಗೆ ತಕ್ಕಂತೆ ಒಳ್ಳೆಯ ಕುಟುಂಬದ ಹೆಣ್ಣನ್ನು ಮದುವೆಯಾಗಲು ಆಶಿಸುತ್ತಾನೆ.

ಇಲ್ಲಿಂದ ಶುರುವಾಗುತ್ತದೆ ನೋಡಿ ಆತನ ಎರಡು ದೋಣಿಯ ಪಯಣ. ಮನೆಗೆ ಬರುವ ಸೊಸೆ ಮನೆಯ ಎಲ್ಲ ಸದಸ್ಯರೊಂದಿಗೆ ಹೊಂದಾಣಿಕೆ ಮಾಡಿಕೊಂಡು, ಮನೆಯ ಎಲ್ಲಾ ಸದಸ್ಯರು ಆಕೆಯನ್ನು ತಮ್ಮಲ್ಲಿ ಒಬ್ಬಳು ಎಂದು ಭಾವಿಸಿ ನಡೆಸಿಕೊಂಡರೆ ಅಷ್ಟೇನು ಸಮಸ್ಯೆಯಾಗುವುದಿಲ್ಲ ಬಿಡಿ,ಆದರೆ ವಿಭಿನ್ನ ಕೌಟುಂಬಿಕ ಹಿನ್ನೆಲೆಯಲ್ಲಿ ಬೆಳೆದು ಬಂದ ಪತ್ನಿ, ಪತಿ ಕೇವಲ ತನ್ನವನಾಗಿರಬೇಕು ಮತ್ತು ತಮ್ಮಿಬ್ಬರ ಮಧ್ಯದಲ್ಲಿ ಬೇರಾರೂ ಇರಬಾರದು ಎಂಬ ಭಾವವನ್ನು ಹೊಂದಿದಾಗ ಮನೆಯಲ್ಲಿ ಮನಸ್ತಾಪಗಳು ಪ್ರಾರಂಭವಾಗಿ ಹೆಂಡತಿ ಮತ್ತು ಕುಟುಂಬದ ನಡುವೆ ಒದ್ದಾಡುವ ಗಂಡಸಿನ ತಲೆ ಕೆಟ್ಟು ಹೋಗುವುದಂತೂ ನಿಶ್ಚಿತ. ಕೊನೆಗೆ ಪಾಲಕರೇ ಅವರಿಬ್ಬರು ದಂಪತಿಗಳಾದರೂ ಸುಖವಾಗಿರಲಿ ಎಂದು ಮಗನಿಗೆ ಬೇರೆ ಮನೆ ಮಾಡಿಕೊಂಡು ಹೋಗಲು ತಿಳಿಸುತ್ತಾರೆ.

ಗೂಡಿನಿಂದ ಹಾರಿ ಹೊರಬಂದ ಪಕ್ಷಿಗಳಂತೆ ಪತಿ–ಪತ್ನಿಯರಿಬ್ಬರು ತಮ್ಮದೇ ಆದ ಮನೆಯಲ್ಲಿ ವಾಸಿಸುತ್ತಾ ಮಕ್ಕಳನ್ನು ಪಡೆದು ಸಂಸಾರದ ಹೊಣೆ ಹೊರುತ್ತಾರೆ.ಆಗಾಗ ತನ್ನ ತಂದೆಯ ಮನೆಗೆ ಹೋಗಿ ಅವರ ಸುಖ ದುಃಖಗಳನ್ನು ವಿಚಾರಿಸುವ, ಹಬ್ಬ ಹರಿದಿನಗಳಲ್ಲಿ, ಶುಭ ಸಮಾರಂಭಗಳಲ್ಲಿ ಮಾತ್ರ ಬಂಧುವಿನಂತೆ ತನ್ನ ಕುಟುಂಬದೊಂದಿಗೆ ಭೇಟಿ ಕೊಡುವ ಮಗ ಮಾನಸಿಕ ಅಭದ್ರತೆಯನ್ನು, ತನ್ನ ಕುಟುಂಬಕ್ಕಾಗಿ ಏನೂ ಮಾಡಲಾಗದ ಮುಜುಗರ ಮತ್ತು ಅಸಹಾಯಕತೆಗಳಲ್ಲಿ ತೊಳಲಾಡುತ್ತಾನೆ. ಮಾಡಲಾದರೂ ಹೇಗೆ ಸಾಧ್ಯ? ಏರುತ್ತಿರುವ ಮನೆ ಬಾಡಿಗೆ, ಖರ್ಚು ವೆಚ್ಚಗಳು, ಮಕ್ಕಳ ವಿದ್ಯಾಭ್ಯಾಸ ಆರೋಗ್ಯತೊಂದರೆ, ಹೊಸದಾಗಿ ಕೊಂಡಿರುವ ಮನೆ, ಕಾರಿನ ಸಾಲಗಳು ಆತನ ಕೈ ಬಾಯಿಯನ್ನು ಕಟ್ಟಿಹಾಕಿ ಬಿಟ್ಟಿರುತ್ತವೆ.

ಇದರ ಜೊತೆ ಬ್ಯಾಂಕಿನಿಂದ ತೆಗೆದುಕೊಂಡ ಸಾಲಗಳ ಕಂತುಗಳು ಬಕಾಸುರನಂತೆ ಬಾಯಿ ತೆರೆದು ನಿಂತಿದ್ದರೆ,ಮಕ್ಕಳು ಬೆಳೆದು ಎದೆಯೆತ್ತರ ನಿಂತು ಅವರ ಮುಂದಿನ ವಿದ್ಯಾಭ್ಯಾಸ,ಮದುವೆ ಕುರಿತ ಯೋಚನೆಗಳು ಆತನನ್ನು ಹಣ್ಣು ಮಾಡುತ್ತವೆ. ಮಧ್ಯ ವಯಸ್ಸಿನಲ್ಲಿಯೇ ವೃದ್ಯಾಪ್ಯದ ಮೆಟ್ಟಿಲನ್ನು ಏರುವ ಆತನಿಗೆ ನಿಧಾನವಾಗಿ ವಯೋ ಸಹಜ ಆರೋಗ್ಯ ತೊಂದರೆಗಳು ಕಾಣಿಸಿಕೊಳ್ಳುತ್ತವೆ.

ತನಗೆ ಅನುಕೂಲಕರವಾಗಿ ಮನೆಯನ್ನು ತೂಗಿಸಿಕೊಂಡು ಹೋಗುವ ಪತ್ನಿ ಇದ್ದರೆ ಆತನ ಬಾಳು ಬಂಗಾರ... ಆಕೆಯೂ ತನ್ನ ನೆರೆಹೊರೆಯವರ ಸಿರಿತನವನ್ನು ಕಂಡು ಹೆಚ್ಚಿನದಕ್ಕೆ ಆಸೆ ಪಟ್ಟರೆ ಮಾತ್ರ ಆತನಿಗೆ ಭೂಲೋಕದಲ್ಲಿಯೇ ನರಕ ದರ್ಶನವಾಗುವುದು ಖಚಿತ.ಇದ್ದುದರಲ್ಲಿಯೇ ಮನೆಯನ್ನು ನಡೆಸಿಕೊಂಡು ಹೋಗು ಎಂದು ಹೇಳುವ ಪತಿ ಆಕೆಯ ಕಣ್ಣಿಗೆ ಕೈಲಾಗದವನಂತೆ ತೋರಿ, ತನ್ನ ಅಸಹನೆಯನ್ನು ಚಾಟಿ ಏಟಿನಂತಹ ಮಾತುಗಳ ಮೂಲಕ ಬೀಸುವ ಪತ್ನಿಯನ್ನು ಅನುನಯಿಸಲು ಸಾಧ್ಯವಾಗದೆ ಪತಿ ಒದ್ದಾಡುತ್ತಾನೆ. ಮತ್ತೆ ಕೆಲವರು ತಮ್ಮ ಚಾಣಾಕ್ಷತೆಯಿಂದ ಪತ್ನಿಯ ಮನವೊಲಿಸಲು ಸಾಧ್ಯವಾಗಿಸಿಕೊಳ್ಳುತ್ತಾರೆ.

ಹೆಣ್ಣು ಮಕ್ಕಳು ಚೆನ್ನಾಗಿ ಓದದಿದ್ದರೆ ಮದುವೆ ಮಾಡಿ ಜವಾಬ್ದಾರಿ ಕಳೆದುಕೊಳ್ಳೋಣ ಎಂದುಕೊಳ್ಳುವ ಪಾಲಕರಿಗೆ ಗಂಡು ಮಕ್ಕಳು ಓದದಿದ್ದರೂ ಉದ್ಯೋಗ ಇಲ್ಲವೇ ವ್ಯವಹಾರ ಮಾಡುವುದು ಬದುಕಿಗೆ ಅನಿವಾರ್ಯ ಎಂಬ ನಿಷ್ಠುರ ಸತ್ಯವನ್ನು ಅರಿತು ಕೈಯಲ್ಲಿರುವ ಬಂಡವಾಳ ಹಾಕಿ ಅವರು ವ್ಯಾಪಾರ ವ್ಯವಹಾರ ಮಾಡಲು, ಮಕ್ಕಳ ಬದುಕಿಗೆ ದಾರಿ ಮಾಡಿ ಕೊಡುತ್ತಾನೆ. ಇಲ್ಲಿಯೂ ಕೂಡ ಆತನಿಗೆ ಕೆಲವೊಮ್ಮೆ ವ್ಯಾಪಾರ ಕೈ ಹಿಡಿಯುವುದಿಲ್ಲ, ಪದೇ ಪದೇ ಪೆಟ್ಟು ತಿನ್ನುತ್ತಾ ಮತ್ತೆ ಮೇಲೇಳುತ್ತಾ ಕೊನೆಗೆ ಬದುಕಿನ ನಿರ್ವಹಣೆಗೆ ಸಾಕಾಗುವಷ್ಟು ಹಣ ಸಂಪಾದಿಸುವಲ್ಲಿ ಯಶಸ್ವಿಯಾದರೆ ಸಾಕಪ್ಪ ಎಂಬಲ್ಲಿಗೆ ಆತ ಬಂದು ನಿಲ್ಲುತ್ತಾನೆ.

ಅದೆಷ್ಟೇ ಆರ್ಥಿಕ, ಸಾಮಾಜಿಕ ಮತ್ತು ಕೌಟುಂಬಿಕ ವಲಯಗಳಲ್ಲಿ ಪುರುಷ ಪೆಟ್ಟು ತಿಂದರೂ ಆತನ ಕುಟುಂಬದ ಸದಸ್ಯರು ಮತ್ತೆ ಆತನ ಆತ್ಮಬಲವನ್ನು ಎತ್ತಿ ಹಿಡಿಯುವ ಮೂಲಕ ಆತನಲ್ಲಿ ಚೈತನ್ಯವನ್ನು ತುಂಬುತ್ತಾರೆ. ಆದರೂ ಕೂಡ ಭಾರತೀಯ ಸಮಾಜದಲ್ಲಿ 80ಕ್ಕೂ ಹೆಚ್ಚು ಜನ ಪುರುಷರು ಮಹಿಳಾ ವಿರೋಧಿಗಳಾಗಿದ್ದು ಹೆಣ್ಣು ಮಕ್ಕಳನ್ನು ತನ್ನ ಗುಲಾಮರೆಂಬಂತೆ ನಡೆಸಿಕೊಳ್ಳುವುದು ಸರ್ವೇಸಾಮಾನ್ಯವಾಗಿದೆ. ಓರ್ವ ಅತಿ ದೊಡ್ಡ ವಿಜ್ಞಾನಿ, ಡಾಕ್ಟರ್, ಇಂಜಿನಿಯರ್, ಪ್ರೊಫೆಸರ್ ರಿಂದ ಹಿಡಿದು ಕೂಲಿ ಮಾಡುವ ವ್ಯಕ್ತಿ ಕೂಡ ಮನೆಯಲ್ಲಿ ತನ್ನ ಪತ್ನಿಗೆ,ತಾಯಿಗೆ ಕನಿಷ್ಠ ಗೌರವವನ್ನು ಕೊಡದೆ ಇರುವ ಸಾಕಷ್ಟು ಉದಾಹರಣೆಗಳು ನಮ್ಮ ಕಣ್ಣಮುಂದಿವೆ.

ತನ್ನ ಮಹಿಳಾ ಮೇಲಧಿಕಾರಿಯ ಬುದ್ಧಿಶಕ್ತಿಯನ್ನು ಸಂಶಯಿಸುವ, ಆಕೆಯ ನಿರ್ಧಾರಗಳನ್ನು ವ್ಯಂಗ್ಯವಾಡುವ ಆದರೆ ಆಕೆಯ ಅಧಿಕಾರದ ಮುಂದೆ 'ಎಸ್ ಬಾಸ್' ಎಂಬಂತೆ ಗೋಣು ಹಾಕುವ ಪುರುಷರು ಮನೆಯಲ್ಲಿ ಪತ್ನಿ ಮತ್ತು ಮಕ್ಕಳನ್ನು ಗುಲಾಮರಂತೆ ನಡೆಸಿಕೊಳ್ಳುವುದನ್ನು ಕೂಡ ನಾವು ಕಾಣುತ್ತಿದ್ದೇವೆ. ಮಹಿಳೆಯರ ಕುರಿತು ಅತ್ಯಂತ ಹೀನಾಯವಾಗಿ ಮಾತನಾಡುವ ಗಂಡಸರು, ಆಕೆಯ ನೈತಿಕತೆಯನ್ನು ಪ್ರಶ್ನಿಸುವ ಮೂಲಕ ಆಕೆಯನ್ನು ಬಗ್ಗುಬಡಿಯಲು ಕೂಡ ಪ್ರಯತ್ನಿಸುತ್ತಾರೆ. ತಾನು ಮದುವೆಯಾಗುವ ಹೆಣ್ಣು ತನ್ನನ್ನು ಅನುಸರಿಸಿಕೊಂಡು ಹೋಗಲಿ ಎಂದು ಬಯಸುವ ಪತಿ ಎಂದೂ ಆಕೆಯನ್ನು ಒಂದೆರಡು ವಿಷಯಗಳಲ್ಲಿಯೂ ಅನುಸರಿಸಿಕೊಂಡು ಹೋಗುವುದಿಲ್ಲ. ಪುರುಷ ಅಹಂಕಾರದ ಪ್ರತಿರೂಪವಾಗಿರುವ ಭಾರತೀಯ ಗಂಡಸರು ಸಾಮಾಜಿಕವಾಗಿ ಬಹಳವೇ ಹಿಂದುಳಿದಿದ್ದಾರೆ.

ತಮ್ಮ ಮನೆಯ ಹೆಣ್ಣು ಮಕ್ಕಳ ಕುರಿತು ರಕ್ಷಣಾತ್ಮಕ ಭಾವವನ್ನು ಹೊಂದಿರುವ ಎಷ್ಟೋ ಯುವಕರು ತಮ್ಮೊಂದಿಗೆ ಒಡನಾಡುವ ಹೆಣ್ಣು ಮಕ್ಕಳ ಕುರಿತು ಅಸಭ್ಯವಾಗಿ ಮಾತನಾಡುತ್ತಾರೆ. ಬಲಾತ್ಕಾರದ ಹಲವಾರು ಪ್ರಕರಣಗಳನ್ನು ಅಧ್ಯಯನ ಮಾಡಿದಾಗ ಅತ್ಯಾಚಾರಕ್ಕೊಳಗಾದ ಯುವತಿಯ ಮೇಲೆ ದುಷ್ಕೃತ್ಯವನ್ನು ಎಸಗಿದವರು ಬಹಳಷ್ಟು ಬಾರಿ ಆಕೆಗೆ ಗೊತ್ತಿರುವವರೇ ಆಗಿರುತ್ತಾರೆ.

ತನ್ನ ಕುಟುಂಬದ ಮಹಿಳೆಯರ ಕುರಿತು ಸೂಕ್ಷ್ಮ ಸಂವೇದನೆಗಳನ್ನು ಹೊಂದಿರುವ ವ್ಯಕ್ತಿ ಬೇರೆ ಹೆಣ್ಣು ಮಕ್ಕಳ ಕುರಿತು ಕೆಟ್ಟದಾಗಿ ಯೋಚಿಸುವುದು ಎಷ್ಟು ಮಟ್ಟಿಗೆ ಸರಿ ಎಂದು ಯೋಚಿಸಬೇಕಲ್ವೇ!?. ಎಲ್ಲರೂ ಹಾಗಿರುವುದಿಲ್ಲ ಎಂದುಕೊಂಡರೂ ಭಯ ಇದ್ದೇ ಇರುತ್ತದೆ. ತುಸು ಆತ್ಮೀಯತೆಯಿಂದ ಮಾತನಾಡಿದರೂ ಎಲ್ಲಿ ಬೇರೆ ಅರ್ಥ ಕಲ್ಪಿಸಿ ತಪ್ಪು ತಿಳಿಯುತ್ತಾರೆ ಎಂಬ ಭಯದಲ್ಲಿ ಬಹಳಷ್ಟು ಹೆಣ್ಣು ಮಕ್ಕಳು ಒದ್ದಾಡುತ್ತಾರೆ.

ಹೀಗೆ ಎಲ್ಲ ರೀತಿಯಿಂದಲೂ ವಿಶ್ಲೇಷಿಸಿದಾಗ ಪುರುಷ ಎಂದರೆ ಪ್ರೀತಿ ವಾತ್ಸಲ್ಯ ಅಕ್ಕರೆ ಸ್ನೇಹ ಎಂಬ ಸಕಾರಾತ್ಮಕ ಗುಣಗಳ ಜೊತೆಗೆ ಉಡಾಫೆ, ಅಹಂಕಾರಿ, ಸಹನೆ ಇಲ್ಲದ, ಸ್ವಾರ್ಥಿ ಎಂಬ ನಕಾರಾತ್ಮಕ ಗುಣಗಳು ಕೂಡ ಕಾಣುತ್ತವೆ. ಒಟ್ಟಿನಲ್ಲಿ ಒಂದೇ ತಾಯಿಯ ಮಕ್ಕಳಾಗಿ ಹುಟ್ಟಿರುವ ಸ್ತ್ರೀ ಪುರುಷರೆಲ್ಲರೂ ಯಾವುದೇ ಭೇದವಿಲ್ಲದೆ ಪರಸ್ಪರ ವಿಶ್ವಾಸ, ನಂಬಿಕೆ, ಗೌರವ, ಭ್ರಾತೃತ್ವ ಮತ್ತು ಸ್ನೇಹ ಭಾವದಿಂದ ವರ್ತಿಸಲಿ ಎಂಬ ಆಶಯ ಎಲ್ಲಾ ಹೆಣ್ಣು ಮಕ್ಕಳದು.

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಭಾದ್ರಪದ । ಸಂವತ್ಸರ: ಕ್ರೋಧಿ

**28–09–2024 – ಶನಿವಾರ**

| | |
|---|---|
| ತಿಥಿ | : ಏಕಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಆಶ್ಲೇಷ |
| ಯೋಗ | : ಸಿದ್ಧಿ |
| ಕರಣ | : ಬಾಳವ |
| ಸೂರ್ಯೋದಯ | : 06:18:42 |
| ಸೂರ್ಯಾಸ್ತ | : 18:15:49 |
| ರಾಹು ಕಾಲ | : 09:18–10:48 |
| ಯಮಘಂಡ ಕಾಲ | : 13:47–15:17 |
| ಗುಳಿಕ ಕಾಲ | : 06:19–07:48 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 27–09–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.83 ಅಡಿ |
| ಒಳ ಹರಿವು | 15135 ಕ್ಯುಸೆಕ್ |
| ಹೊರ ಹರಿವು | 15228 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.109 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1619.08 ಅಡಿ |
| ಒಳ ಹರಿವು | 1230 ಕ್ಯುಸೆಕ್ |
| ಹೊರ ಹರಿವು | 9606 ಕ್ಯುಸೆಕ್ |
| ಸಾಮರ್ಥ್ಯ | 58.780 ಟಿಎಂಸಿ |

# ದಸರಾ ನೆಪದಲ್ಲಿ ಅಧಿಕಾರಿಗಳು ಕಳ್ಳಾಟ ಆಡಿದ್ರೆ ಸಹಿಸಲ್ಲ ಸುಳ್ಳು ಹೇಳುವುದನ್ನು ನಿಲ್ಲಿಸಬೇಕು: ಸಿಎಂ ಸಿದ್ದರಾಮಯ್ಯ



> ದಸರಾ ಜನರ ಉತ್ಸವ. ಇದು ಸರ್ಕಾರದ ಉತ್ಸವ ಅಲ್ಲ. ಇದರ ಹೊಣೆ ಜಿಲ್ಲಾಡಳಿತದ್ದು. ದಸರಾ ನೆಪದಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತ ಆಗಬಾರದು. ದಸರಾ ಜವಾಬ್ದಾರಿ ಇದ್ದವರನ್ನು ಹೊರತುಪಡಿಸಿ ಉಳಿದವರು ದಸರಾ ನೆಪದಲ್ಲಿ ಕಳ್ಳಾಟ ಆಡಬಾರದು.
> – ಸಿದ್ದರಾಮಯ್ಯ, ಮುಖ್ಯಮಂತ್ರಿ

■ **ಹಂಪಿ ಟೈಮ್ಸ್ ಮೈಸೂರು**

ದಸರಾ ನೆಪದಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತ ಆಗಬಾರದು. ದಸರಾ ಜವಾಬ್ದಾರಿ ಇದ್ದವರನ್ನು ಹೊರತುಪಡಿಸಿ ಉಳಿದವರು ದಸರಾ ನೆಪದಲ್ಲಿ ಕಳ್ಳಾಟ ಆಡಬಾರದು–ಅಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ಎಚ್ಚರಿಕೆ.

ಮೈಸೂರು ಜಿಲ್ಲಾ ಪ್ರಗತಿ ಪರಿಶೀಲನಾ ಸಭೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳ ಕಾರ್ಯವೈಖರಿ ನೆನಪಿಸಿದರು.

ಎಲ್ಲಾ ನ್ಯಾಯಲಯಗಳಿಗಿಂತ ಜನತಾ ನ್ಯಾಯಾಲಯ ಮುಖ್ಯ, ಆತ್ಮಸಾಕ್ಷಿ ಮುಖ್ಯ ಎನ್ನುವ ಮಹಾತ್ಮಗಾಂಧಿಯವರ ಮಾತನ್ನು ಅಧಿಕಾರಿಗಳಿಗೆ ನೆನಪಿಸಿದ ಸಿಎಂ

ನೆಪ ಹೇಳುವುದು, ಸುಳ್ಳು ಹೇಳುವುದನ್ನು ಅಧಿಕಾರಿಗಳು ನಿಲ್ಲಿಸಬೇಕು. ಒಂದು ಸುಳ್ಳು ಹೇಳಿದರೆ ಅದನ್ನು ಸಮರ್ಥಿಸಲು ಮತ್ತೊಂದು, ಇನ್ನೊಂದು ಸುಳ್ಳುಗಳನ್ನು ಹೇಳುತ್ತಲೇ ಹೋಗಬೇಕಾಗುತ್ತದೆ. ಹೀಗಾಗಿ ಸುಳ್ಳು ಮತ್ತು ನೆಪ ಹೇಳುವ ಅಧಿಕಾರಿಗಳು ಸಿಕ್ಕಿ ಬೀಳುತ್ತಾರೆ. ಇದು ನಿಮ್ಮ ವೃತ್ತಿ ಜೀವನಕ್ಕೆ ಒಳ್ಳೆಯದಲ್ಲ ಎಂದು ಅಧಿಕಾರಿಗಳಿಗೆ ಸಲಹೆ ನೀಡಿದರು.

ಕಾನೂನು ಸುವ್ಯವಸ್ಥೆ ಸರಿ ಇಲ್ಲದಿದ್ದರೆ ರಾಜ್ಯದ ಅಭಿವೃದ್ಧಿ ಮತ್ತು ಆರ್ಥಿಕತೆಯ ಪ್ರಗತಿ ಸಾಧ್ಯ. ಪೊಲೀಸ್ ಇಲಾಖೆಯ ಬೇಜವಾಬ್ದಾರಿಯಿಂದ ಅಪರಾಧಗಳು ಆಗಬಾರದು. ರಾಜ್ಯದ ಬಂಡವಾಳ ಹೂಡಿಕೆಗೂ, ಕಾನೂನು–ಸುವ್ಯವಸ್ಥೆಗೂ ನೇರಾನೇರ ಸಂಬಂಧವಿದೆ–ಈ ಬಗ್ಗೆ ಕಟ್ಟೆಚ್ಚರ ವಹಿಸಿ ಎಂದು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದ ಸಿಎಂ.

ಆರೋಗ್ಯ–ಶಿಕ್ಷಣ–ಅನ್ನ–ನೀರು–ವಿದ್ಯುತ್–ರಸ್ತೆ ಸುರಕ್ಷತೆ ನನ್ನ ಪ್ರಥಮ ಆದ್ಯತೆ.

ಅಧಿಕಾರಿಗಳಿಗೆ ಯಾವುದೇ ಕಾರಣಕ್ಕೂ ಜಾತಿ ಸೋಂಕು ಇರಬಾರದು. ಸಂವಿಧಾನ ಮತ್ತು ಜಾತ್ಯತೀತವಾಗಿ ಸರ್ಕಾರದ ಕಾರ್ಯಕ್ರಮಗಳನ್ನು, ಜನರ ಸೇವೆಯನ್ನು ಮಾಡಬೇಕು.

ನಾವು ಜಾರಿ ಮಾಡಿರುವ ಐದು ಗ್ಯಾರಂಟಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪುವುದನ್ನು ಮೊದಲ ಆದ್ಯತೆಯನ್ನಾಗಿ ಪರಿಗಣಿಸಬೇಕು. ಈ ಐದೂ ಗ್ಯಾರಂಟಿಗಳಲ್ಲಿ ಮಧ್ಯವರ್ತಿಗಳಿಗೆ ಅವಕಾಶವೇ ಇಲ್ಲದಂತೆ ನೇರವಾಗಿ ಫಲಾನುಭವಿಗಳ ಮಡಿಲಿಗೆ ಸೇರುತ್ತಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಈ ವಿಚಾರದಲ್ಲಿ ಅಸಡ್ಡೆ ಮತ್ತು ಉದಾಸೀನವನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ.

ಸರ್ಕಾರ ಅಗತ್ಯವಿದ್ದಷ್ಟು ಹಣವನ್ನು ನೀಡುತ್ತಿದೆ. ಈ ಹಣ ಫಲಾನುವಿಗಳಿಗೆ ತಲುಪದಿದ್ದರೆ ಸಂಬಂಧಪಟ್ಟ ಅಧಿಕಾರಿಗಳನ್ನು ಹೊಣೆ ಮಾಡಲಾಗುವುದು.

ವರ್ಷಕ್ಕೆ ಸುಮಾರು 560000 ಕೋಟಿ ಜನರಿಗಾಗಿ, ಜನರ ಗ್ಯಾರಂಟಿಗಳಿಗಾಗಿ ತೆಗೆದಿರಿಸಿದ್ದೇನೆ. ಇಷ್ಟೂ ಹಣ ಜನರಿಗೆ ತಲುಪಬೇಕು.

ಅಭಿವೃದ್ಧಿ ಕೆಲಸಗಳಿಗೂ ಹಣ ಹೇರಳವಾಗಿ ಬಿಡುಗಡೆ ಆಗುತ್ತಿದೆ. ಅನುದಾನ ಬಿಡುಗಡೆ ಆಗಿದೆ. ಬಜೆಟ್ನಲ್ಲಿ ಘೋಷಣೆ ಆಗಿರುವ ಕಾರ್ಯಕ್ರಮಗಳಿಗೆ ಘೋಷಿಸಿದ್ದಷ್ಟು ಹಣ ಬಿಡುಗಡೆ ಆಗುತ್ತಿದೆ. ನಾವು ಅನುದಾನ ಕೊಟ್ಟಾಗ ಆಕ್ಷನ್ ಪ್ಲಾನ್ ರೆಡಿ ಆಗಬೇಕು. ಈಗಾಗಲೇ ಸೆಪ್ಟೆಂಬರ್ ಮುಗಿಯುತ್ತಿದೆ. ಈ ಆರ್ಥಿಕ ವರ್ಷಕ್ಕೆ ಆರು ತಿಂಗಳು ಮಾತ್ರ ಉಳಿದಿದೆ. ಯಾರು ಆಕ್ಷನ್ ಪ್ಲಾನ್ ಮಾಡಿಕೊಂಡಿಲ್ಲ ಅವರ ಮೇಲೆ ಕಠಿಣ ಕ್ರಮವನ್ನು ಮುಲಾಜಿಲ್ಲದೆ ತೆಗೆದುಕೊಳ್ಳಲಾಗುವುದು.

ಅಧಿಕಾರಿಗಳು ಅಭಿವೃದ್ಧಿ ಕಾರ್ಯಗಳ ವಿಚಾರದಲ್ಲಿ ನಿರ್ಲಕ್ಷ್ಯ ಮಾಡಿದರೆ ಅಂತಹ ಅಧಿಕಾರಿಗಳನ್ನು ನಮ್ಮ ಸರ್ಕಾರ ಸಹಿಸಲ್ಲ. ಜಿಲ್ಲಾ ಮಂತ್ರಿಗಳೂ ಈ ವಿಚಾರದಲ್ಲಿ ಮುಲಾಜು ತೋರಿಸಬಾರದು.

ಮೈಸೂರು ಸಾಂಸ್ಕೃತಿಕವಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದೆ. ಪ್ರತಿ ವರ್ಷ ದಸರಾ ಮಹೋತ್ಸವವನ್ನು ಸರ್ಕಾರ ಅತ್ಯಂತ ಅರ್ಥಪೂರ್ಣವಾಗಿ ಆಚರಿಸುತ್ತಿದೆ. ಕಳೆದ ವರ್ಷ ಬರಗಾಲ ಇತ್ತು. ಭೀಕರ ಬರಗಾಲ. ಈ ವರ್ಷ ಮಳೆ ಆಗಿದೆ. ವಾಡಿಕೆಗಿಂತ ಹೆಚ್ಚು ಮಳೆ ಆಗಿದೆ. ಎಲ್ಲಾ ಜಲಾಶಯಗಳೂ ತುಂಬಿವೆ. ಹೀಗಾಗಿ ಬರಗಾಲ ಇಲ್ಲದಿರುವುದರಿಂದ ಅದ್ದೂರಿಯಾಗಿ, ಅರ್ಥಪೂರ್ಣವಾಗಿ ದಸರಾ ಆಚರಿಸುವ ಜೊತೆಗೆ ವೈಭವ ಮತ್ತು ಸಂಭ್ರಮಕ್ಕೆ ಕೊರತೆ ಆಗಬಾರದು. ನಮ್ಮ ಪರಂಪರೆ, ಚರಿತ್ರೆ, ಇತಿಹಾಸದ ವೈಭವ ಮಹೋತ್ಸವದಲ್ಲಿ ಮತ್ತು ಮಹೋತ್ಸವದ ಪರಿಣಾಮದಲ್ಲಿ ಜನರಿಗೆ ಕಾಣಿಸಬೇಕು.

ನಾನು ಮಂತ್ರಿ ಆಗಿ ನಲವತ್ತು ವರ್ಷ ಆಗಿದೆ. ಎಲ್ಲಾ ಹಂತದ ಅಧಿಕಾರವನ್ನು ನೋಡಿದ್ದೇನೆ. ಅಧಿಕಾರಿಗಳು ಯಾವಾಗಲೂ ಸಮಯ ನಿರ್ವಹಣೆಯಲ್ಲಿ ಜಾಗರೂಕರಾಗಿರಬೇಕು. ಶಿಸ್ತು ಇಲ್ಲದವರು ಕರ್ತವ್ಯಲೋಪ ಮಾಡ್ತಾರೆ ಎನ್ನುವುದು ನನ್ನ ಅನುಭವ ಎಂದು ತಮ್ಮ ಅನುಭವದ ಹಿನ್ನೆಲೆಯಲ್ಲಿ ವಿವರಿಸಿದರು.

ನೆಪ ಹೇಳುವುದು, ಸುಳ್ಳು ಹೇಳುವುದನ್ನು ಅಧಿಕಾರಿಗಳು ನಿಲ್ಲಿಸಬೇಕು. ಒಂದು ಸುಳ್ಳು ಹೇಳಿದರೆ ಅದನ್ನು ಸಮರ್ಥಿಸಲು ಮತ್ತೊಂದು, ಇನ್ನೊಂದು ಸುಳ್ಳುಗಳನ್ನು ಹೇಳುತ್ತಲೇ ಹೋಗಬೇಕಾಗುತ್ತದೆ. ಹೀಗಾಗಿ ಸುಳ್ಳು ಮತ್ತು ನೆಪ ಹೇಳುವ ಅಧಿಕಾರಿಗಳು ಸಿಕ್ಕಿ ಬೀಳುತ್ತಾರೆ. ಇದು ನಿಮ್ಮ ವೃತ್ತಿ ಜೀವನಕ್ಕೆ ಒಳ್ಳೆಯದಲ್ಲ ಎಂದು ಅಧಿಕಾರಿಗಳಿಗೆ ಸಲಹೆ ನೀಡಿದರು.

ಕಾನೂನು ಸುವ್ಯವಸ್ಥೆ ಸರಿ ಇಲ್ಲದಿದ್ದರೆ ರಾಜ್ಯದ ಅಭಿವೃದ್ಧಿ ಮತ್ತು ಆರ್ಥಿಕತೆಯ ಪ್ರಗತಿ ಸಾಧ್ಯ. ಪೊಲೀಸ್ ಇಲಾಖೆಯ ಬೇಜವಾಬ್ದಾರಿಯಿಂದ ಅಪರಾಧಗಳು ಆಗಬಾರದು. ರಾಜ್ಯದ ಬಂಡವಾಳ ಹೂಡಿಕೆಗೂ, ಕಾನೂನು–ಸುವ್ಯವಸ್ಥೆಗೂ ನೇರಾನೇರ ಸಂಬಂಧವಿದೆ–ಈ ಬಗ್ಗೆ ಕಟ್ಟೆಚ್ಚರ ವಹಿಸಿ ಎಂದು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು.

ಆರೋಗ್ಯ–ಶಿಕ್ಷಣ–ಅನ್ನ–ನೀರು–ವಿದ್ಯುತ್–ರಸ್ತೆ ಸುರಕ್ಷತೆ ನನ್ನ ಪ್ರಥಮ ಆದ್ಯತೆ. ಕಳೆದ ವರ್ಷ ಬರಗಾಲ ಇದ್ದಾಗಲೂ ತೊಂದರೆ ಆಗದಷ್ಟು ವಿದ್ಯುತ್ ಉತ್ಪಾದನೆ ಮಾಡಿದ್ದೇವೆ. ಇದಕ್ಕಾಗಿ ಇಂಧನ ಇಲಾಖೆಗೆ ಅಭಿನಂದನೆ ಸಲ್ಲಿಸಿದರು.

ಸುಮಾರು ಇಪ್ಪತ್ತು ಸಾವಿರ ಕೋಟಿ ಸರ್ಕಾರದ ಮೇಲೆ ಹೊರೆ ಆದರೂ ಏಳನೇ ವೇತನ ಆಯೋಗ ಜಾರಿ ಮಾಡಿ ನಿಮ್ಮ (ಅಧಿಕಾರಿಗಳ–ಸಿಬ್ಬಂದಿಯ) ವೇತನ ಹೆಚ್ಚಿಸಿದ್ದೇವೆ. ಗ್ಯಾರಂಟಿಗಳಿಗೆ ಹಣ ಕೊಟ್ರೂ ಕೂಡ ನಿಮ್ಮ ಕೆಲಸಕ್ಕೆ ತಕ್ಕಂತೆ ಸಂಬಳ ಕೊಡಬೇಕು ಎನ್ನುವ ಉದ್ದೇಶದಿಂದ ಆಯೋಗದ ಶಿಫಾರಸ್ಸಿನಂತೆ ವೇತನ ಹೆಚ್ಚಿಸಿದ್ದೇವೆ.

ನಾವೆಲ್ಲಾ ಗ್ರಾಮೀಣ ಬದುಕಿನಿಂದಲೇ ಬಂದವರು. ನಮ್ಮ ಗ್ರಾಮೀಣ ಬದುಕು, ಗ್ರಾಮೀಣ ಸಮಾಜವನ್ನು ಮೇಲ್ದರ್ಜೆಗೆ ಏರಿಸಬೇಕು ಎನ್ನುವುದು ನನ್ನ ಗುರಿ ಎಂದರು.



## ವಿಷ್ಣು ಸೇನಾ ಸಮಿತಿಯಿಂದ ಶಾಸಕ ಗವಿಯಪ್ಪಗೆ ಸನ್ಮಾನ

ಹೊಸಪೇಟೆಯ ಎಂ.ಪಿ.ಪ್ರಕಾಶನಗರದ ಮೂಲಕ ಹಾದುಹೋಗಿರುವ ಮುಖ್ಯರಸ್ತೆಗೆ ಮತ್ತು ರೈಲ್ವೇಗೇಟ್ ತಿರುವಿನ ಬಳಿಯ ವೃತ್ತಕ್ಕೆ ಸಾಹಸಸಿಂಹ ಡಾ.ವಿಷ್ಣುವರ್ಧನ ಹೆಸರನ್ನು ನಾಮಕರಣಗೊಳಿಸಲು ಸಹಕರಿಸಿದ ಶಾಸಕ ಎಚ್.ಆರ್.ಗವಿಯಪ್ಪ ಅವರನ್ನು ಡಾ.ವಿಷ್ಣುವರ್ಧನ ಸೇನಾ ಸಮಿತಿಯಿಂದ ಶುಕ್ರವಾರ ಸನ್ಮಾನಿಸಲಾಯಿತು. ಸಮಿತಿ ಅಧ್ಯಕ್ಷ ಪಂಪಾಪತಿ, ವಿಶ್ರಾಂತ ಉಪನ್ಯಾಸಕ ಚಂದ್ರಶೇಖರ್ ಶಾಸ್ತ್ರಿ, ಮುಖಂಡ ಅಲ್ಲಾಭಕ್ತಿ ಸೇರಿದಂತೆ ಇತರರಿದ್ದರು.

## ಪರಿಶಿಷ್ಟ ಜಾತಿ ಕಾನೂನು ಪದವೀಧರರಿಂದ ಅರ್ಜಿ: ಅವಧಿ ವಿಸ್ತರಣೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಸಮಾಜ ಕಲ್ಯಾಣ ಇಲಾಖೆಯಿಂದ 2024–25ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ ಕಾನೂನು ನ್ಯಾಯವಾದಿ ವೃತ್ತಿಯ ಪ್ರಾಯೋಗಿಕ ತರಬೇತಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುಲು ಈ ಹಿಂದೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅವಧಿಯನ್ನು ಸೆಪ್ಟೆಂಬರ್ 30ರ ವರೆಗೆ ವಿಸ್ತರಣೆ ಮಾಡಲಾಗಿದೆ.

ಈ ಯೋಜನೆಗೆ ಆಯ್ಕೆಯಾದ ಆಭ್ಯರ್ಥಿಗಳಿಗೆ 2 ವರ್ಷ ತರಬೇತಿ ನೀಡಲಿದ್ದು, ತಿಂಗಳಿಗೆ ರೂ. 10,000 ಶಿಷ್ಯವೇತನ ಮಂಜೂರು ಮಾಡಲಾಗುವುದು. ಆಸಕ್ತ ಕಾನೂನು ಪದವಿ ಪಡೆದ ಅಭ್ಯರ್ಥಿಗಳು ಇಲಾಖೆಯ ವೆಬ್‌ಸೈಟ್ www.sw.kar.nic.in. ನಲ್ಲಿ Stipend To Law Graduate ರಲ್ಲಿ ಅರ್ಜಿ ಸಲ್ಲಿಸಿ ಸಮಾಜ ಕಲ್ಯಾಣ ಇಲಾಖೆಯ ಕಚೇರಿಗೆ ಒಂದು ಪ್ರತಿಯನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಹೊಸಪೇಟೆ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು (ಗ್ರೇಡ್–1) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪರಿಶಿಷ್ಟ ಪಂಗಡ ಕಾನೂನು ಪದವೀಧರರಿಗೆ ತರಬೇತಿ : ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ 2024–25ನೇ ಸಾಲಿನಲ್ಲಿ ಪರಿಶಿಷ್ಟ ಪಂಗಡದ ಕಾನೂನು ಪದವೀಧರರಿಗೆಆಡಳಿತ ನ್ಯಾಯಾಧೀಕರಣದಲ್ಲಿ ಕಾನೂನು ನ್ಯಾಯವಾದಿ ವೃತ್ತಿಯ ಪ್ರಾಯೋಗಿಕ ತರಬೇತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಅಕ್ಟೋಬರ್ 7 ಕೊನೆಯ ದಿನವಾಗಿರುತ್ತದೆ.

ಈ ಯೋಜನೆಗೆ ಆಯ್ಕೆಯಾದ ಆಭ್ಯರ್ಥಿಗಳಿಗೆ 2 ವರ್ಷ ತರಬೇತಿ ನೀಡಲಿದ್ದು, ತರಬೇತಿಯನ್ನು ಪಡೆಯಲು ಇಚ್ಚಿಸುವ ಅಭ್ಯರ್ಥಿಗಳು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು. ತಂದೆ, ತಾಯಿ, ಪೋಷಕರ ವಾರ್ಷಿಕ ಆದಾಯ ರೂ.2.50 ಲಕ್ಷಕ್ಕಿಂತ ಹೆಚ್ಚಿರಬಾರದು. ವಿಜಯನಗರ ಜಿಲ್ಲೆಗೆ ಮಾತ್ರ ಸಂಬಂಧಿಸಿದ ಹಾಗೂ ವಕೀಲ ವೃತ್ತಿ ನಡೆಸಲು ಅರ್ಹತೆಯುಳ್ಳ ಕಾನೂನು ಪದವೀಧರರು ಮಾತ್ರ ಈ ತರಬೇತಿಗೆ ಅರ್ಹರಾಗಿರುತ್ತಾರೆ. ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ 2 ವರ್ಷದೊಳಗೆ ಕಾನೂನು ಪದವಿಯನ್ನು ಪಡೆದಿರಬೇಕು. ಅಭ್ಯರ್ಥಿಯ ವಯಸ್ಸು, ಅರ್ಜಿ ಸಲ್ಲಿಸುವ ಮುನ್ನ 40 ವರ್ಷ ಮೀರಿರಬಾರದು. ಈಗಾಗಲೇ ಕಾನೂನು ವಿಷಯದಲ್ಲಿ ತರಬೇತಿ ಪಡೆದಿರಬಾರದು. ಅಭ್ಯರ್ಥಿಯು ಕಾನೂನು ಪದವಿಯಲ್ಲಿ ಉತ್ತೀರ್ಣರಾದ 02 ವರ್ಷಗಳೊಳಗೆ ಕರ್ನಾಟಕ ಬಾರ್ ಅಸೋಸಿಯೇಷನ್‌ನಲ್ಲಿ ನೋಂದಣಿ ಮಾಡಿಸಿರಬೇಕು.

ಆಭ್ಯರ್ಥಿಗಳು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವೆಬ್‌ಸೈಟ್ www.tw.kar.nic.inಗೆ ಭೇಟಿ ನೀಡಿ, application ಲಿಂಕ್ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜನರ ಶ್ರೇಯೋಭಿವೃದ್ಧಿಗಾಗಿ ಗ್ಯಾರಂಟಿ ಯೋಜನೆಗಳು ಜಾರಿ

**ಮೊದಲ ಪುಟದಿಂದ**

ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಿಗೆ ಹಾಗೂ ಸದಸ್ಯರನ್ನು ಕಂಡು ಯೋಜನೆಗಳ ಸದುಪಯೋಗ ಪಡೆದುಕೊಳ್ಳಬೇಕು. ಅರ್ಹ ಫಲಾನುಭವಿಗಳು ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆಗಳಿಂದ ವಂಚಿತರಾಗಬಾರದು ಎಂದು ತಿಳಿಸಿದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷರಾದ ರೆಡ್ಡಿ ಶ್ರೀನಿವಾಸ ಅವರು ಮಾತನಾಡಿ, ಗ್ಯಾರಂಟಿ ಯೋಜನೆಗಳು ರಾಜ್ಯ ಸರ್ಕಾರದ ಮಹತ್ವಕಾಂಕ್ಷೆಯಾಗಿರುವ ಸಾಮಾಜಿಕ ಕಾರ್ಯಕ್ರಮವಾಗಿವೆ. ಅರ್ಹರೆಲ್ಲರೂ ಗ್ಯಾರಂಟಿ ಯೋಜನೆಗಳ ವ್ಯಾಪ್ತಿಗೆ ಒಳಪಡಬೇಕು ಎಂಬುದು ಸರ್ಕಾರದ ಉದ್ದೇಶವಾಗಿದ್ದು, ಯಾವುದೇ ಅರ್ಹ ಫಲಾನುಭವಿಗಳು ಈ ಯೋಜನೆಯಿಂದ ಹೊರಗುಳಿಯಬಾರದು. ಈ ಹಿನ್ನೆಲೆಯಲ್ಲಿ ಪ್ರಮಾಣಿಕವಾಗಿ ಐದು ಗ್ಯಾರಂಟಿ ಯೋಜನೆಗಳನ್ನು ಜನರಿಗೆ ತಲುಪಿಸುವಂತಹ ಕೆಲಸವನ್ನು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಮಾಡಬೇಕು ಎಂದು ತಿಳಿಸಿದರು. ಶಕ್ತಿ, ಗೃಹಲಕ್ಷ್ಮಿ, ಅನ್ನಭಾಗ್ಯ, ಗೃಹಜ್ಯೋತಿ ಹಾಗೂ ಯುವನಿಧಿ ಸೇರಿ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಉಂಟಾಗುತ್ತಿರುವ ಸಣ್ಣ–ಪುಟ್ಟ ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿ ಎಲ್ಲಾ ಅರ್ಹ ಫಲಾನುಭವಿಗಳಿಗೆ ಗ್ಯಾರಂಟಿ ಯೋಜನೆಗಳನ್ನು ತಲುಪಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೊಪ್ಪಳ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಬಾಲಚಂದ್ರ ಎನ್, ಸದಸ್ಯರಾದ ಅನ್ವರ್ ಹುಸೇನ್ ಎಂ ಗಡಾದ್, ಜ್ಯೋತಿ ಎಂ ಗೊಂಡಬಾಳ, ಮಾನ್ವಿ ಭಾಷ, ಅನ್ನದಾನ ಸ್ವಾಮಿ ಸಾಲಿಮಠ, ಅಳವಂಡಿ ಗ್ರಾ.ಪಂ ಅಧ್ಯಕ್ಷರಾದ ಶಂಕ್ರಮ್ಮ ಜೋಗಿನ, ಉಪಾಧ್ಯಕ್ಷರಾದ ಶಾರದಮ್ಮ, ಗ್ರಾ.ಪಂ ಅಭಿವೃದ್ಧಿ ಅಧಿಕಾರಿಗಳಾದ ಕೊಟ್ರಪ್ಪ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು
ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

**10 ನೇ ತರಗತಿ ಮಾದರಿ ಪ್ರಶ್ನೆ- ಪತ್ರಿಕೆ ಹಿಂದಿ**

दसवीं कक्षा प्रथम संकलनात्मक परीक्षा : 2024 - 25
अंक : 80 हिन्दी समय : 3 घंटे

---

**ಮುಂದುವರೆದ ಭಾಗ -----**

**VI 36. गध्यांश को ध्यानपूर्वक पढकर निम्नलिखित प्रश्नों के उत्तर लिखिए : 4 x 1 = 4**

साहित्य दो प्रकार में दिखाई देता है । शिष्ट साहित्य और जनपद साहित्य । ज्ञानी और शास्त्रज्ञ जिस साहित्य का सृजन करते हैं उसे शिष्ट साहित्य कहा जाता है । शिष्ट साहित्य लिखित होता है। जनपद साहित्य अलिखित होता है । इसकी रक्षा मौखिक परंपरा से होती है । ज्यादातर जनपद साहित्य ग्रामों में जन्म लेते है ।

क) साहित्य के दो प्रकार कौन- कौन से हैं ?
ख) शिष्ट साहित्य का सृजन कैसे होता है ?
ग) जनपद साहित्य क्या है ?
घ) जनपद साहित्य का जन्म कहाँ हुआ ?

---

**VIII. दिए गए संकेत बिंदुओं के आधार पर 12 – 15 वाक्यों में किसी एक विषय के बारे में निबंध लिखिए : 1 x 4 = 4**

**37 क ) इंटरनेट :** अर्थ , लाभ , हानी, उपसंहार

**अर्थ :** इंटरनेट अनगिनत कंप्यूटरों के कई अंतर्जालों का एक दूसरे से संबंध स्थापित करने का जाल है ।

इंटरनेट एक तरह से विश्वव्यापी कंप्यूटरों का अंतर्जाल है । जिसकी वजह से पूरे विश्व का विस्तार एक गाँव का - सा छोटा हो गया है ।

**लाभ :**

* इंटरनेट द्वारा घर बैठे-बैठे खरीदारी कर सकते हैं ।
* कोई भी बिल भर सकते हैं ।
* इससे दुकान जाने और लाइन में घंटों खडे रहने का समय बच सकता है ।
* इंटरनेट – बैंकिंग द्वारा दुनिया की किसी भी जगह पर चाहे जितनी भी रकम भेजी जा सकती है ।
* इंटरनेट के द्वारा पल भर में कोई भी विचार हो, स्तिर चित्र हो, वीडियो चित्र हो, दुनिया के किसी भी कोने में भेज सकते हैं ।
* इंटरनेट के मदद से ’ वीडियो कान्फरेन्स ’ कर सकते है ।
* इंटरनेट की सहायता से बेरोजगारी मिठा सकते है । इंटरनेट की वजह से सोशल नेटवर्किंग हो रहा है ।
* इंटरनेट की मदद से ई – गवर्नेन्स लागू किया गया है ।
* चिकित्सा, कृषि, अंतरिक्ष ज्ञान, विज्ञान, शिक्षा आदि क्षेत्रों में इंटरनेट अपना कमाल दिखाया है ।
* देश की रक्षादलों की कार्यवाही में भी इंटरनेट का बहुत बडा योगदान है ।

**हानी :**

* इंटरनेट एक ओर वरदान है तो दूसरी ओर अभिशाप है ।
* इंटरनेट की वजह से पैरसी, बैंकिंग फ्राड, हैकिंग आदी बढ रही है ।
* मुक्त वेब साइट, चैटिंग आदि से युवा पीढी ही नही बच्चे भी इंटरनेट कबंध बाहों के पाश में फँसे हुए है ।
* इससे वक्त का दुरुपयोग होता है ।
* बच्चें अनुपयुक्त और अनावश्यक जानकारी हासिल कर रहे है ।

**उपसंहार :** इंटरनेट से मानव की जीवनशली और सोच में क्रांतिकारी परिवर्तन हुआ है। बडे बूढों से लेकर छोटे बच्चों तक सब पर इंटरनेट का असर पडा है । आज इंटरनेट के बिना कोई भी काम नही हो सकती है । जीवन के हर क्षेत्र में इंटरनेट का बहुत बडा योगदान है । इंटरनेट एक ओर वरदान है तो दूसरी ओर अभिशाप है । इसलिए सब लोग इंटरनेट से सचेत रहना चाहिए ।

---

**IX . निम्नलिखित विषय के बारे में एक पत्र लिखिए : 1 x 5 = 5**

**38** अपनी बहन की शादी के कारण दो दिन छुट्टी के लिए प्रधानाध्यपक जी के नाम पर पत्र लिखिए : **अथवा**

पढाई के बारे में सलाह देते हुए अपने भाई के नाम पर पत्र लिखिए ।

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : **ಹೆಚ್.ತುಕಾರಾಮ್ ನಾಯ್ಕ** ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

**ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055